# ಪುಣಜನೂರು ಪಂಚಾಯಿತಿ ಗ್ರಾಮಗಳ ಯುವಜನರ ಪರಿಸ್ಥಿತಿ ವಿಶ್ಲೇಷಣಾ ವರದಿ

## ಏಪ್ರಿಲ್ ೨೦೧೧ ರಿಂದ ಏಪ್ರಿಲ್ ೨೦೧೨ ರವರೆಗೆ




## ಪುನರ್ಚಿತ್

**ಚಂದನಪುರಂ (ಕುಂಬಾರಗುಂಡಿ),**

**ಮೂಕನಪಾಳ್ಯ ಅಂಚೆ, ಚಾಮರಾಜನಗರ ತಾಲ್ಲೂಕು**

**ಚಾಮರಾಜನಗರ ಜಿಲ್ಲೆ –೫೭೧೧೨೭**

## **ಪುಣಜನೂರು ಪಂಚಾಯಿತಿ ಗ್ರಾಮಗಳ ಯುವಜನರ ಪರಿಸ್ಥಿತಿ ವಿಶ್ಲೇಷಣಾ ವರದಿ**

ಪುನರ್ಚಿತ್ ಸಮೂಹವು ಪರ್ಯಾಯ ಶಿಕ್ಷಣದ ಭಾಗವಾಗಿ ಯುವಜನರೊಟ್ಟಿಗೆ ಕೆಲಸ ಮಾಡುತ್ತಿದ್ದು, ಆರಂಭಿಕ ಹಂತದಲ್ಲಿ ಸ್ಥಳೀಯ ಯುವಜನರ ಸ್ಥಿತಿಗತಿಗಳನ್ನು ಅರ್ಥ ಮಾಡಿಕೊಳ್ಳಲು ಪುಣಜನೂರು ಪಂಚಾಯಿತಿಯ ವಿವಿಧ ಸಮುದಾಯಗಳ ಸುಮಾರು ೨೦೦ ಯುವಜನರನ್ನು ಭೇಟಿ ಮಾಡಲಾಗಿದೆ. ಇವರಲ್ಲಿ ೧೧೩ ಜನರನ್ನು ನಿರ್ದಿಷ್ಟವಾಗಿ ಭೇಟಿ ಮಾಡಿದ್ದು, ಔಪಚಾರಿಕ, ಅನೌಪಚಾರಿಕ ವಿಧಾನಗಳ ಮೂಲಕ ಮಾಹಿತಿ ಸಂಗ್ರಹಿಸಲಾಗಿದೆ. ಈ ಅಧ್ಯಯನದಲ್ಲಿ ಯುವಜನರ ಆಸಕ್ತಿ ಮತ್ತು ಅಭಿರುಚಿಗಳು, ಯುವಜನರ ವಲಸೆಗೆ ಕಾರಣಗಳು, ಯುವಜನರಿಗೆ ಎದುರಾಗಿರುವ ಸಮಸ್ಯೆ ಮತ್ತು ಸವಾಲುಗಳನ್ನು ಕುರಿತು ಮಾಹಿತಿಗಳನ್ನು ಸಂಗ್ರಹಿಸಿ ವರದಿಯನ್ನು ಸಿದ್ಧಪಡಿಸಲಾಗಿದೆ.

ಈ ವರದಿಯನ್ನು ಪುನರ್ಚಿತ್ ತಂಡದ ಸದಸ್ಯರಾದ **ಪಿ.ವೀರಭದ್ರನಾಯ್ಕ, ಬಿ. ಶಿವನಂಜು, ಎ.ಆರ್.ವಾಸವಿ** ರವರು ಸಿದ್ಧಪಡಿಸಿರುತ್ತಾರೆ.

**ಪೀಠಿಕೆ**

ಯಾವುದೇ ಒಂದು ದೇಶದ ಭವಿಷ್ಯವು ಆ ಸಮಾಜದಲ್ಲಿನ ಯುವಜನರ ಪಾತ್ರ ಮತ್ತು ಸಾಮರ್ಥ್ಯವನ್ನು ಒಳಗೊಂಡಿರುತ್ತದೆ. ಮನುಷ್ಯ ಯುವ ವಯಸ್ಸಿನಲ್ಲಿ ಮಾಡಬಹುದಾದ ಸಾಧನೆಗಳನ್ನು ತನ್ನ ಜೀವಿತ ಅವಧಿಯ ಇತರೆ ಸಂದರ್ಭಗಳಲ್ಲಿ ಮಾಡಲು ಸಾಧ್ಯವಾಗುವುದಿಲ್ಲ. ೨೦೧೧ ರ ಯುನೆಸೆಫ್‌ನ ಮಾಹಿತಿಯನ್ವಯ ಭಾರತದಲ್ಲಿ ೨೪೩ ಮಿಲಿಯನ್ ಯುವಜನರಿದ್ದು, ಸಮಾಜದಲ್ಲಿ ಅವರ ಸರ್ವತೋಮುಖ ಬೆಳವಣಿಗೆ ಅತ್ಯಗತ್ಯವಾಗಿದೆ. ಅಂದರೆ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಈ ಎಲ್ಲಾ ರಂಗಗಳಲ್ಲೂ ಯುವ ಜನರು ಶಸಕ್ತರಾದಾಗ ಮಾತ್ರ ಉತ್ತಮ ಸಮಾಜ ನಿರ್ಮಾಣವಾಗಲು ಸಾಧ್ಯ. ಆದರೆ ಭಾರತದ ಸ್ಥಿತಿಯನ್ನು ಗಮನಿಸಿದಾಗ ದೇಶದಲ್ಲಿ ೪೧% ರಷ್ಟು ಯುವಜನರಿದ್ದು, ಅವರನ್ನು ಸಮರ್ಥಗೊಳಿಸುವಲ್ಲಿ ಮತ್ತು ದೇಶದ ಅಭಿವೃದ್ಧಿಯಲ್ಲಿ ಸಮರ್ಥವಾಗಿ ಬಳಸಿಕೊಳ್ಳುವಲ್ಲಿ ಸೋತಿರುವುದನ್ನು ಒಪ್ಪಿಕೊಳ್ಳಬೇಕಾಗಿದೆ. ಅದಕ್ಕೆ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿನ ದೋಷಗಳು ಕಾರಣವಾಗಿದ್ದು, ಯುವ ಜನರಿಗೆ ಶಿಕ್ಷಣದ ಪ್ರಾಮುಖ್ಯತೆಯನ್ನು ಅರ್ಥಮಾಡಿಸುವಲ್ಲಿ, ಸುಸ್ಥಿರವಾದ ಶಿಕ್ಷಣ ನೀಡುವಲ್ಲಿ ವಿಫಲವಾಗಿದೆ.

ಶಿಕ್ಷಣದ ಮೂಲ ಉದ್ದೇಶ ವ್ಯಕ್ತಿ ಮತ್ತು ಸಮಾಜದ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗಬೇಕು. ಆದರೆ ಶಿಕ್ಷಣ ವ್ಯವಸ್ಥೆ ಬದುಕನ್ನು ರೂಪಿಸಿಕೊಳ್ಳುವ ಶಿಕ್ಷಣ ನೀಡುತ್ತಿದಿಯೇ ? ಯುವಜನರಿಗೆ ಸಮುದಾಯ, ಕುಟುಂಬ ಹಾಗೂ ಶಾಲಾ ಕಾಲೇಜುಗಳಲ್ಲಿರುವ ಸ್ಥಾನಮಾನವೇನು ? ಯುವಜನರು ಸಮಾಜವನ್ನು ಹೇಗೆ ಅರ್ಥಮಾಡಿಕೊಂಡಿದ್ದಾರೆ ? ಸಮಾಜದ ಬೇರೆ, ಬೇರೆ ವ್ಯವಸ್ಥೆಗಳಾದ ಮಾರುಕಟ್ಟೆ, ರಾಜಕೀಯ ಹಾಗೂ ಧಾರ್ಮಿಕ ಸಂಸ್ಥೆಗಳು ಯುವ ಜನರನ್ನು ಹೇಗೆ ಬಳಸಿಕೊಳ್ಳುತ್ತವೆ ? ಯುವಜನರಲ್ಲಿರುವ ಆಸಕ್ತಿ, ಕೌಶಲ್ಯಗಳನ್ನು ಮನೆ ಮತ್ತು ಶಾಲಾ, ಕಾಲೇಜುಗಳಲ್ಲಿ ಪರಿಗಣಿಸಲಾಗುತ್ತಿದೆಯೇ ? ಯುವಜನರ ಮೇಲೆ ಮಾಧ್ಯಮಗಳ ಪ್ರಭಾವಗಳೇನು ? ಯುವಜನರು ಕೃಷಿಯಲ್ಲಿ ತೊಡಗಿಸಿಕೊಳ್ಳಲು ಹಿಂಜರಿಕೆ ಏಕೆ ? ಇವೇ ಮುಂತಾದ ಪ್ರಶ್ನೆಗಳ ಹಿನ್ನೆಲೆಯಲ್ಲಿ ಯುವಜನರ ಸ್ಥಿತಿಗಳನ್ನು ಅರ್ಥ ಮಾಡಿಕೊಳ್ಳಬೇಕಾದ ಅವಶ್ಯಕತೆ ಇದೆ.

ಆಧುನೀಕರಣ ಹಾಗೂ ಜಾಗತೀಕರಣದ ಪ್ರಭಾವದಿಂದ ಯುವಜನರು ಗ್ರಾಮೀಣ ಕಸಬುಗಳ ಬಗ್ಗೆ ಕೀಳರಿಮೆ ಹೊಂದಿದ್ದು, ತಾವು ಏನು ಮಾಡಬೇಕೆಂಬ ಗೊಂದಲ್ಲದಲ್ಲಿದ್ದಾರೆ. ಅವರೆಲ್ಲಾ ಸ್ವಾವಲಂಬಿಗಳಾಗಿ ಸ್ವ ಸ್ಥಳಗಳಲ್ಲಿ ಜೀವನ ನಿರ್ವಹಣೆ ಮಾಡಲು ಸಾಧ್ಯವಾಗದೆ ಬಹುತೇಕ ನಿರುದ್ಯೋಗಿಗಳಾಗಿದ್ದಾರೆ. ಯುವಜನರನ್ನು ಜಾತಿ, ರಾಜಕೀಯ ಹಾಗೂ ಧಾರ್ಮಿಕ ವ್ಯವಸ್ಥೆಗಳು ದಿಕ್ಕು ತಪ್ಪಿಸುತ್ತಿವೆ. ಅಲ್ಲದೆ ಯುವಜನರು ಭ್ರಷ್ಟಾಚಾರ, ವರದಕ್ಷಿಣೆ, ಭ್ರೂಣ ಹತ್ಯೆಯಂತಹ ಕೃತ್ಯಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದ್ದು, ವೈಜ್ಞಾನಿಕ ಚಿಂತನೆಗಿಂತ ಮೌಢ್ಯತೆಯಲ್ಲಿ ಸಿಲುಕಿರುವುದು ಅತಂಕಕಾರಿಯಾಗಿದೆ. ಸಮಾಜದಲ್ಲಿನ ಉತ್ತಮ ಸಾಂಸ್ಕೃತಿಕ, ಮಾನವೀಯ, ಜಾತ್ಯಾತೀತ ಮೌಲ್ಯಗಳನ್ನು ಅರ್ಥ

ಮಾಡಿಕೊಂಡು ಜೀವನದಲ್ಲಿ ರೂಢಿಸಿಕೊಳ್ಳುತ್ತಿರುವುದು ಕಡಿಮೆ. ಹಾಗಾಗಿ ಅವರ ಸ್ವ-ಗ್ರಾಮ, ಸಮುದಾಯ, ಸಂಸ್ಕೃತಿ, ಪರಿಸರ ಮತ್ತು ಕೃಷಿ ಇವುಗಳ ಬಗ್ಗೆ ಕೀಳರಿಮೆ ಹೊಂದಿದ್ದಾರೆ. ಇದರ ಜೊತೆಗೆ ಸರ್ಕಾರ ಮತ್ತು ರಾಜಕೀಯ ವ್ಯವಸ್ಥೆಗಳಲ್ಲಿರುವ ಭ್ರಷ್ಟಾಚಾರ, ಅನ್ಯಾಯ, ಪ್ರಾಮಾಣಿಕತೆ ಮತ್ತು ಬದ್ಧತೆಯ ಕೊರತೆಗಳು, ನಿಯಮಗಳನ್ನು ಪಾಲಿಸದಿರುವುದು ಯುವ ಜನರನ್ನು ದಾರಿ ತಪ್ಪುವಂತೆ ಪ್ರೇರೇಪಿಸುತ್ತಿವೆ.

ಯುವ ಜನರು ತಮ್ಮ ಜೀವನ ನಿರ್ವಹಣೆಗಾಗಿ ಬೇರೆ ಕಡೆ ವಲಸೆ ಹೋಗುತ್ತಿದ್ದು, ಅತೃಪ್ತಿಕರ ಮತ್ತು ಅಭದ್ರತೆಯ ಜೀವನ ಸಾಗಿಸುವ ಅನಿವಾರ್ಯ ಸ್ಥಿತಿಯಲ್ಲಿದ್ದಾರೆ. ಯುವಜನರು ಹೆಚ್ಚು ನಗರ ಪ್ರದೇಶಗಳ ಕಡೆ ಆಕರ್ಷಿತರಾಗಿ ಪೇಟೆ ಸೇರಿದರೆ ಮಾತ್ರ ಬದುಕು ಹಸನಾಗುತ್ತದೆ ಎಂಬ ಭ್ರಮೆಯಿಂದ 'ಕೆಟ್ಟು ಪಟ್ಟಣ ಸೇರು' ಎಂಬ ಗಾದೆಗೆ ಅನ್ವರ್ಥವಾಗುವಂತೆ ತಮ್ಮ ಕುಟುಂಬ, ಸಮುದಾಯ, ಕೃಷಿ ತೊರೆದು ಪಟ್ಟಣ ಸೇರುತ್ತಿದ್ದಾರೆ. ಇದಕ್ಕೆಲ್ಲಾ ಕಾರಣ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿರುವ ಕೊರತೆಗಳು, ಹಳೆಯ ಪಠ್ಯಕ್ರಮಗಳು, ಶಿಕ್ಷಣವು ಓದು ಬರಹ ಮತ್ತು ಪರೀಕ್ಷೆಗಷ್ಟೇ ಸೀಮಿತವಾಗಿದ್ದು, ಸೃಜನಾತ್ಮಕ, ಕೌಶಲ್ಯಧಾರಿತ ಬಹು ಆಯಾಮದ ಕಲಿಕೆ ಮತ್ತು ಸ್ಥಳೀಯ ಅಗತ್ಯತೆಗಳಿಗೆ ಹೆಚ್ಚು ಅನುಗುಣವಾಗಿಲ್ಲ. ಅಲ್ಲದೆ ಕೃಷಿ ಮತ್ತು ಗ್ರಾಮೀಣ ವೃತ್ತಿ ಕೌಶಲ್ಯಗಳು ಮುಖ್ಯ ಎಂದು ಪರಿಗಣಿಸಲಾಗಿಲ್ಲ. ಯುವಜನರಲ್ಲಿ ಸ್ವಾವಲಂಬನೆ ಬದುಕಿಗೆ ಸಿದ್ಧಗೊಳಿಸುವ ಬದಲು ಅವಲಂಬನೆ ಬದುಕಿಗೆ ನೂಕಲಾಗುತ್ತಿದೆ.

ಮೇಲಿನ ಎಲ್ಲಾ ಕಾರಣಗಳಿಂದಾಗಿ ಸಮಾಜದ ಶಿಕ್ಷಣ, ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ವ್ಯವಸ್ಥೆಗಳು, ಕೃಷಿ ವಿಧಾನಗಳನ್ನು ಪುನರ್‌ಮನನ ಮಾಡಿಕೊಂಡು, ಅವುಗಳಿಗೆ ಪರ್ಯಾಯಗಳನ್ನು ಕಂಡುಕೊಳ್ಳಬೇಕಿದೆ. ಇದಕ್ಕೆ ಪೂರಕವಾಗಿ ಹಿಂದಿನ ಮತ್ತು ಮುಂದಿನ ತಲೆಮಾರುಗಳ ಕೊಂಡಿಯಾಗಿ ಸಮಾಜದ ಕೇಂದ್ರ ಬಿಂದುವಾದ ಯುವಜನಾಂಗ ಸದೃಢವಾಗಿ ರೂಪುಗೊಳ್ಳಬೇಕಾಗಿದೆ. ಈ ದಿಸೆಯಲ್ಲಿ ಪರ್ಯಾಯ ವ್ಯವಸ್ಥೆಗಳನ್ನು ಕಂಡುಕೊಳ್ಳಲು ಪ್ರಪಂಚದ ಬೇರೆ ಬೇರೆ ಕಡೆಗಳಲ್ಲಿ ಹುಡುಕಾಟ, ಪ್ರಯತ್ನಗಳು ನಡೆಯುತ್ತಿವೆ. ಅಂತಯೇ 'ಪುನರ್ಚಿತ್' ಕೇಂದ್ರವು ಸ್ಥಳೀಯಜ್ಞಾನ, ಸಾಮಾಜಿಕ ಪರಿವರ್ತನೆ, ವಿಮರ್ಶಾತ್ಮಕ ಆಲೋಚನೆಗಳ ಜೊತೆಗೆ  ಸಮಾಜ, ಸಂಸ್ಕೃತಿ, ಪ್ರಜಾಸತ್ತ'ತೆ, ಪರಿಸರ ಹಾಗೂ ವಿವಿಧ ರೀತಿಯ ಕೌಶಲ್ಯಗಳನ್ನು ರೂಪಿಸಿ ಯುವ ಜನರೊಂದಿಗೆ ಕೆಲಸ ಮಾಡುವ ಆಶಯ ಹೊಂದಿದೆ. ಈ ಹಿನ್ನೆಲೆಯಲ್ಲಿ ಚಾಮರಾಜನಗರ ಜಿಲ್ಲೆಯ ಪುಣಜನೂರು ಪಂಚಾಯಿತಿಯ ಯುವಜನರನ್ನು ಅರ್ಥೈಸಿಕೊಳ್ಳುವ ಉದ್ದೇಶದಿಂದ ಕ್ಷೇತ್ರಾಧ್ಯಯನದ ಮೂಲಕ ಇಲ್ಲಿನ ವಾಸ್ತವಾಂಶಗಳನ್ನು ಸಮಗ್ರವಾಗಿ ವಿಶ್ಲೇಷಣೆ ಮಾಡಲಾಗಿದೆ.

## ಪುಣಜನೂರು ಪಂಚಾಯಿತಿ ಗ್ರಾಮಗಳ ಯುವಜನರು ಸ್ಥಿತಿಗತಿ

ಪುಣಜನೂರು ಪಂಚಾಯಿತಿ ಗ್ರಾಮಗಳ ಯುವಜನರಲ್ಲಿ ಹೆಚ್ಚಿನವರು ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಣಕ್ಕೆ ಸೀಮಿತವಾಗಿದ್ದು, ಕೆಲವರು ಪದವಿಪೂರ್ವ, ಪದವಿ, ಡಿ.ಎಡ್, ಬಿ.ಎಡ್ ಹಾಗೂ ಐಟಿಐ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಮೆಟ್ರಿಕ್ ನಂತರ ಸ್ಥಳೀಯವಾಗಿ ಕಾಲೇಜುಗಳು ಇಲ್ಲದಿರುವುದು, ವಿದ್ಯಾಭ್ಯಾಸಕ್ಕೆ ಸಂಬಂಧಿಸಿದಂತೆ ಸೂಕ್ತ ಮಾರ್ಗದರ್ಶನ ಕೊರತೆಯ ಕಾರಣಗಳಿಂದಾಗಿ ಶಿಕ್ಷಣವನ್ನು ಮುಂದುವರಿಸುವವರ ಪ್ರಮಾಣ ಬಹಳ ಕಡಿಮೆ ಇದೆ. ಈ ಪ್ರದೇಶದ ಯುವಜನರಲ್ಲಿ ಚಲನೆ ಜಾಸ್ತಿ ಇದ್ದು, ಕೆಲಸಕ್ಕಾಗಿ ವಿವಿಧ ಪ್ರದೇಶಗಳಿಗೆ ವಲಸೆ ಹೋಗುತ್ತಾರೆ. ಹಳ್ಳಿಯಲ್ಲಿದ್ದರೆ ಏನೂ ಪ್ರಯೋಜನವಿಲ್ಲ, ಹೊರಗೆ ಹೋಗಿ ದುಡಿದರೆ ಮಾತ್ರ ಉದ್ಧಾರ ಆಗಲು ಸಾಧ್ಯ ಎನ್ನುವ ಮನಸ್ಥಿತಿ ಇದೆ. ಅಲ್ಲದೆ ತಮ್ಮ ಹಿರಿಯರು, ಸಹಪಾಠಿಗಳು ಹೊರಗೆ ಸಂಪಾದನೆ ಮಾಡುವುದನ್ನು ನೋಡಿ, ತಾವು ಅವರಂತೆಯೇ ಸಂಪಾದಿಸಬೇಕೆಂದು ಪ್ರೇರೇಪಿತಗೊಂಡಿದ್ದಾರೆ. ಪೋಷಕರು ಕೂಡ ತಮ್ಮ ಮಕ್ಕಳು ತಮ್ಮಂತೆ ಕಷ್ಟಪಡಬಾರದು, ಅವರು ನೆರಳಲ್ಲಿ ಕೂತು ಸಂಪಾದಿಸಬೇಕೆಂಬ ಮನೋಧೋರಣೆ ಹೊಂದಿದ್ದು, ಹೊರಗೆ ಹೋಗಿ ದುಡಿದರೆ ಮನೆಯ ಆರ್ಥಿಕ ಸಮಸ್ಯೆಗಳು ಕಡಿಮೆ ಆಗುತ್ತದೆ ಎಂಬ ಅಭಿಪ್ರಾಯವು ಇದೆ. ಈ ರೀತಿಯ ಮನೋಧೋರಣೆಗೆ ಮುಖ್ಯವಾಗಿ ದೇಶದಲ್ಲಿನ ಜಾಗತೀಕರಣ, ಖಾಸಗೀಕರಣ ಹಾಗೂ ಆಧುನಿಕತೆಯ ಪ್ರಭಾವಗಳು ಕಾರಣವಾಗಿವೆ. ಈ ಪ್ರದೇಶದಲ್ಲಿ ಸೋಲಿಗ, ಲಂಬಾಣಿ, ಮುಸ್ಲಿಂ ಹಾಗೂ ಬಡಗ ಸಮುದಾಯಗಳ ಯುವ ಜನರಿದ್ದು, ಅವರಲ್ಲಿ ಹಲವು ಭಿನ್ನತೆಯ ಅಂಶಗಳನ್ನು ಕಾಣಬಹುದು. ಈ ವಿಷಯಗಳಿಗೆ ಸಂಬಂಧಿಸಿದಂತೆ ಕ್ಷೇತ್ರ ಭೇಟಿ ಮಾಡಿದ ಸಂದರ್ಭದಲ್ಲಿ ತಿಳಿದು ಬಂದ ಹಲವು ಅಂಶಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

ಅಧ್ಯಯನದ ಭಾಗವಾಗಿ ವಿವಿಧ ಸಮುದಾಯಗಳು, ಯುವಜನರ ವೈಯಕ್ತಿಕ ಭೇಟಿ, ಗುಂಪು ಚರ್ಚೆ, ಕ್ಷೇತ್ರ ಅವಲೋಕನ, ಸ್ಥಳೀಯ ಸಾಹಿತ್ಯ ಹಾಗೂ ಸಂಘ ಸಂಸ್ಥೆಗಳಿಂದ ಅಗತ್ಯ ಮಾಹಿತಿಗಳನ್ನು ಸಂಗ್ರಹಿಸಿ ವಿಶ್ಲೇಷಿಸಿ ಕಂಡು ಬಂದ ಅಂಶಗಳನ್ನು ವರದಿ ಮಾಡಲಾಗಿದೆ. ಅಧ್ಯಯನ ಕ್ಷೇತ್ರದಲ್ಲಿ ೧೧೬ ಯುವ ಜನರನ್ನು ನೇರ ಭೇಟಿ ಮಾಡಲಾಗಿದ್ದು, ೮೧ ಯುವಕರು, ೩೫ ಯುವತಿಯರಿದ್ದು, ಇವರಲ್ಲಿ ೧೧೦ ಯುವ ಜನರು ಅವಿವಾಹಿತರಾಗಿದ್ದು, ೦೬ ಯುವಜನರು ಮಾತ್ರ ವಿವಾಹವಾಗಿದ್ದಾರೆ. ಇವರಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ೬೩ (ಯುವಕರು–೪೮, ಯುವತಿಯರು–೧೫) ಯುವಜನರಿದ್ದು, ಲಂಬಾಣಿ ಸಮುದಾಯಕ್ಕೆ ಸೇರದವರು ಹೆಚ್ಚಿನ ಪ್ರಮಾಣದಲ್ಲಿದ್ದಾರೆ. ಪರಿಶಿಷ್ಟ ಪಂಗಡಕ್ಕೆ ಸೇರಿದ ೩೦ ಸೋಲಿಗ (ಯುವಕರು–೧೯, ಯುವತಿಯರು–೧೧) ಯುವಜನರಿದ್ದು, ಅಲ್ಪ ಸಂಖ್ಯಾತರಾದ ಮುಸ್ಲಿಂ ಸಮುದಾಯಕ್ಕೆ ಸೇರಿದ ೦೭ (ಯುವಕರು–೦೪, ಯುವತಿಯರು–೦೩) ಯುವಜನರು ಹಾಗೂ ಇತರೆ ಸಮುದಾಯಗಳಿಗೆ ಸೇರಿದ ೧೬ ಯುವಜನರು (ಬಡಗ ಸಮುದಾಯದ ೦೬ ಯುವಕರು, ೦೬ ಯುವತಿಯರು, ಲಿಂಗಾಯಿತ ಸಮುದಾಯದ ೦೪ ಯುವಕರು) ಇದ್ದಾರೆ. ಯುವಜನರ ಶೈಕ್ಷಣಿಕ ವಿವರಗಳನ್ನು ಪರಿಶೀಲಿಸಿದಾಗ ಹೆಚ್ಚು ಮೆಟ್ರಿಕ್ ಮತ್ತು ಪಿಯುಸಿ ಶಿಕ್ಷಣ ಪಡೆದವರಾಗಿದ್ದು, ಹೆಚ್ಚಿನ ವಿವರಗಳನ್ನು ಅನುಬಂಧ ೦೫ ರಲ್ಲಿ ನೀಡಲಾಗಿದೆ. ಭೇಟಿ ಮಾಡಿರುವ ಯುವ ಜನರಲ್ಲಿ ೧೦೪ ಜನರು

೧೬ ರಿಂದ ೨೪ ವಯೋಮಾನದವರಾಗಿದ್ದು, ೧೨ ಯುವ ಜನರು ೨೫ ರಿಂದ ೨೬ ವಯೋಮಾನದವರಾಗಿದ್ದಾರೆ. ಇವರಲ್ಲಿ ೫೦ ಯುವಜನರು ಸ್ಥಳೀಯವಾಗಿ ಕೆಲಸ, ಅಂಗಡಿ, ಹೋಟೇಲ್ ವ್ಯಾಪಾರ, ವಿದ್ಯಾಭ್ಯಾಸ ಮತ್ತು ವ್ಯವಸಾಯದಲ್ಲಿ ತೊಡಗಿಸಿಕೊಂಡಿದ್ದಾರೆ. ೬೬ ಯುವ ಜನರು ತಮಿಳುನಾಡು, ಕೇರಳ, ಕೊಡಗು, ಬೆಂಗಳೂರು ಮುಂತಾದ ಕಡೆ ವಲಸೆ ಹೋಗಿ ದುಡಿಯುತ್ತಿದ್ದಾರೆ. ಯುವಜನರ ಕೆಲಸಗಳ ವಿವರಗಳನ್ನು ಅನುಬಂಧ ೦೬ ರಲ್ಲಿ ನೀಡಲಾಗಿದೆ.

**ಅನುಬಂಧ ೦೫. ಯುವ ಜನರ ಶೈಕ್ಷಣಿಕ ವಿವರ**

| ಶಿಕ್ಷಣದ ಮಟ್ಟ | ಉತ್ತೀರ್ಣ (Passed) | ಅನುತ್ತೀರ್ಣ (Failed) | ಅರ್ಧದಲ್ಲಿ ಶಾಲೆ ಬಿಟ್ಟವರು (Discontinued) | ಓದುತ್ತಿರುವವರು (Studying) | ಒಟ್ಟು (Total) |
|---|---|---|---|---|---|
| ೫ ರಿಂದ ೯ | ೩ | ೦ | ೧೫ | ೧ | ೧೯ |
| ಪ್ರೌಢ ಶಿಕ್ಷಣ | ೨೬ | ೨೫ | ೩ | ೨ | ೫೬ |
| ಪದವಿ ಪೂರ್ವ | ೦ | ೮ | ೮ | ೭ | ೨೩ |
| ಡಿಪ್ಲಮೋ | ೨ | ೦ | ೦ | ೦ | ೨ |
| ಡಿ.ಎಡ್ | ೩ | ೦ | ೦ | ೦ | ೩ |
| ಪದವಿ | ೨ | ೦ | ೦ | ೭ | ೯ |
| ಬಿ.ಎಡ್ | ೨ | ೦ | ೦ | ೧ | ೩ |
| ಎಂ.ಎ | ೧ | ೦ | ೦ | ೦ | ೧ |
| | ೩೯ | ೩೩ | ೨೬ | ೧೮ | ೧೧೬ |

**ಅನುಬಂಧ ೦೬. ಯುವ ಜನರು ಮಾಡುತ್ತಿರುವ ಕೆಲಸಗಳು**

| ಯುವ ಜನರು ಮಾಡುತ್ತಿರುವ ಕೆಲಸಗಳು | ಯುವ ಜನರ ಸಂಖ್ಯೆ |
|---|---|
| ಟೇಲರಿಂಗ್ ತರಬೇತಿ, ಕಸೂತಿ, ಟೇಲರಿಂಗ್ ವೃತ್ತಿ | ೮ |
| ಕೂಲಿ | ೩೭ |
| ಕೃಷಿ/ವ್ಯವಸಾಯ | ೯ |
| ಓದುತ್ತಿದ್ದಾರೆ. | ೧೮ |
| ಮನೆ ಕೆಲಸಗಳು | ೧೫ |
| ವಾಹನ ಚಾಲನೆ (ಡ್ರೈವಿಂಗ್) | ೩ |
| ಹೋಟೇಲ್ ಮತ್ತು ಅಂಗಡಿ ವ್ಯಾಪಾರ, ಬಟ್ಟೆಗಿರಣಿ, ಬೇಕರಿ, ಕ್ಯಾಸೆಟ್ ಮಾರಾಟ, ಇತರೆ ಕೆಲಸಗಳು | ೨೬ |
| **ಒಟ್ಟು** | **೧೧೬** |

## ಯುವಜನರ ಪ್ರವೃತ್ತಿ (ಟ್ರೆಂಡ್ಸ್) :

ಪುಣಜನೂರು ಗ್ರಾಮ ಪಂಚಾಯಿತಿಯ ಗ್ರಾಮಗಳ ಯುವ ಜನರಲ್ಲಿ ಚಲನೆ (ಮೊಬಿಲಿಟಿ) ಹೆಚ್ಚಾಗಿದ್ದು, ಹಣಕಾಸಿನ ಆದಾಯಕ್ಕೆ (ಕ್ಯಾಷ್ ಇನ್‌ಕಂ) ಹೆಚ್ಚು ಗಮನ ನೀಡುತ್ತಾರೆ. ಹೆಚ್ಚಿನ ಯುವಜನರು ಅಂಗಡಿ, ಹೋಟೆಲ್ ವ್ಯಾಪಾರ, ಫೈನಾನ್ಸ್ ವ್ಯವಹಾರಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಯುವ ಜನರು ನಗರ ಜೀವನದ ಕಡೆ ಹೆಚ್ಚು ಆಕರ್ಷಿತರಾಗಿದ್ದು, ಫ್ಯಾಷನ್ ಬಗ್ಗೆ ಒಲವು ಹೊಂದಿದ್ದಾರೆ. ಅವರ ಉಡುಗೆ-ತೊಡಿಗೆ, ಮಾತು (ಸಂವಹನ), ಹೇರ್‌ಸ್ಟೈಲ್ ತುಂಬಾ ಆಧುನಿಕವಾಗಿವೆ. ಇತರ ಪ್ರದೇಶಗಳ ಯುವ ಜನರಂತೆ ಈ ಪ್ರದೇಶದ ಯುವ ಜನರಲ್ಲೂ ಸಂವಹನ ಪೆಟ್ಟಿಗೆ (ಮೊಬೈಲ್ ಫೋನ್) ಬಳಕೆ ಮತ್ತು ಎಫ್.ಎಂ ಹಾಡುಗಳನ್ನು ಕೇಳುವುದು ಹೆಚ್ಚಾಗಿದೆ. ಮನೆಗಳಲ್ಲಿ ದೂರದರ್ಶನ (ಟಿವಿ), ಡಿವಿಡಿ ಮೂಲಕ ಹಾಗೂ ಥಿಯೇಟರ್‌ಗೆ ಹೋಗಿ ಸಿನಿಮಾ ನೋಡುತ್ತಾರೆ (ಕನ್ನಡದ ದರ್ಶನ್, ಪುನೀತ್,

ವಿಷ್ಣುವರ್ಧನ್, ತಮಿಳಿನ ರಜನಿಕಾಂತ್, ವಿಜಯ್, ವೆಡಿವೇಲು ಇವೇ ಮುಂತಾದ ನಟರ ಸಿನಿಮಾಗಳನ್ನು ಹೆಚ್ಚು ಇಷ್ಟಪಡುತ್ತಾರೆ). ಕೆಲವು ಸಣ್ಣ ಪುಟ್ಟ ವ್ಯವಹಾರಗಳು, ಕಾಲಕಳೆಯಲು ಗೆಳೆಯರ ಭೇಟಿ ಮುಂತಾದ ಕಾರಣಗಳಿಂದ ದ್ವಿ ಚಕ್ರ ವಾಹನಗಳಾದ ಮೋಟಾರ್ ಬೈಕ್ ಮತ್ತು ಬೈಸಿಕಲ್‌ಗಳಲ್ಲಿ ಊರೂರು ಸುತ್ತಾಡುವುದು ಹೆಚ್ಚಾಗಿ ಕಂಡು ಬರುತ್ತದೆ. ಅಲ್ಲದೆ ದುಡಿಯುವ ಯುವ ಜನರಲ್ಲಿ ಮಧ್ಯಪಾನ, ಧೂಮಪಾನ ಮಾಡುವುದು ಸಾಮಾನ್ಯವಾಗಿದೆ.

## ಯುವಜನರಲ್ಲಿ ಕಂಡು ಬರುವ ಸಾಮಾನ್ಯ ಅಂಶಗಳು

ಈ ಪ್ರದೇಶದ ಹೆಚ್ಚಿನ ಯುವ ಜನರು ಮೆಟ್ರಿಕ್ ಪಡೆಯುವುದು ಸಾಮಾನ್ಯವಾಗಿದ್ದು, ವಿವಿಧ ಗ್ರಾಮಗಳಿಂದ ಸುಮಾರು ೧೫-೨೦ ಯುವಜನರು ಪದವಿಪೂರ್ವ, ಪದವಿ ಶಿಕ್ಷಣ ಪಡೆಯಲು ಚಾಮರಾಜನಗರಕ್ಕೆ ಹೋಗುತ್ತಿದ್ದಾರೆ. ಬಹುತೇಕ ಯುವಜನರು ಮೆಟ್ರಿಕ್‌ವರೆಗೆ ಕನ್ನಡ ಮಾಧ್ಯಮದಲ್ಲಿ ಕಲಿತು, ಪದವಿಪೂರ್ವ ಶಿಕ್ಷಣ ಹಂತದಲ್ಲಿ ಇಂಗ್ಲೀಷ್ ಮಾಧ್ಯಮದ (ಪಿಸಿಎಂಬಿ, ಬಿಬಿಎಂ, ಬಿಎಸ್‌ಡ್ಬ್ಲ್ಯೂ, ಕಾಮರ್ಸ್, ಐ.ಟಿ.ಐ, ಡಿಪ್ಲಮೋ ಇತ್ಯಾದಿ) ಕೋರ್ಸ್‌ಗಳಿಗೆ ಸೇರುತ್ತಾರೆ. ಆದರೆ ಅವರಿಗೆ ಇಂಗ್ಲೀಷ್ ಮಾಧ್ಯಮದಲ್ಲಿ ಕಲಿಯಲು ಕಷ್ಟವಾಗುವುದರಿಂದ ವ್ಯಾಸಂಗವನ್ನು ಅರ್ಧಕ್ಕೆ ನಿಲ್ಲಿಸುತ್ತಾರೆ ಅಥವಾ ಅನುತ್ತೀರ್ಣರಾಗುತ್ತಾರೆ. ಹೀಗೆ ಶಾಲೆ ಬಿಟ್ಟವರು, ಈಗಾಗಲೇ ಶಾಲೆ ಬಿಟ್ಟು ಕೆಲಸ ಮಾಡುವವರ ಜೊತೆ ಸೇರಿ ಸೇಲಂ, ತಿರುಪೂರಿನ ಬಟ್ಟೆ ಕಾರ್ಖಾನೆ, ಬೆಂಗಳೂರಿನಲ್ಲಿ ಕ್ಯಾಸೆಟ್ ಮಾರಾಟ, ಬೇಕರಿ ಕೆಲಸಗಳು, ಕೇರಳದ ಮತ್ತು ತಮಿಳುನಾಡಿನ ಕಾಫಿ ತೋಟ, ಕಾಲುವೆ ಹಾಗೂ ಕಟ್ಟಡದ ಕಾಮಗಾರಿ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಉನ್ನತ ಶಿಕ್ಷಣ ಪಡೆದ ಇಬ್ಬರು ಯುವಕರು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಸರ್ಕಾರಿ ಕೆಲಸಗಳನ್ನು ಪಡೆಯುವ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಉದಾ: ಅರಣ್ಯ ಪರಿವೀಕ್ಷಕರು, ದ್ವಿತೀಯ ದರ್ಜೆ ಸಹಾಯಕರು, ಕಂಡಕ್ಟರ್, ಪೋಲೀಸ್ ಪೇದೆ ಇತ್ಯಾದಿ. ಇನ್ನೂ ಕೆಲವು ಯುವಜನರು ವ್ಯವಸಾಯದ ಸಂದರ್ಭದಲ್ಲಿ ತಮ್ಮ ಭೂಮಿಗಳಲ್ಲಿ ದುಡಿಮೆ ಮತ್ತು ಕಾಡಿನಿಂದ ಒಣ ಕಟ್ಟಿಗೆ ತರುವುದು, ದನ, ಕರು, ಮೇಕೆಗಳನ್ನು ನೋಡಿಕೊಳ್ಳುತ್ತಾರೆ.

ಈ ಪ್ರದೇಶದ ಭೂಮಿಯನ್ನು ಹೊಂದಿರುವ ಯುವಜನರು ಕೃಷಿಯಲ್ಲಿ ತೊಡಗಿಸಿಕೊಂಡಿರುವುದು ಕಡಿಮೆ ಇದ್ದು, ಕೃಷಿಯಿಂದ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಿಲ್ಲ ಎಂಬ ಮನೋಧೋರಣೆಯಿದೆ. ಜೀವನೋಪಾಯಕ್ಕಾಗಿ ಅಂಗಡಿ, ಹೋಟೆಲ್ ವ್ಯಾಪಾರ, ಬಟ್ಟೆ ಕಾರ್ಖಾನೆ, ಅರಣ್ಯ ಉತ್ಪನ್ನಗಳ ಸಂಗ್ರಹದ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಅಲ್ಲದೆ ಈ ರೀತಿಯ ಕೆಲಸಗಳಿಗೆ ಹೆಚ್ಚಿನ ವಿದ್ಯಾಭ್ಯಾಸ ಹಾಗೂ ತರಬೇತಿಗಳ ಅಗತ್ಯವಿಲ್ಲ ಎಂಬ ಮನೋಭಾವ ಯುವ ಜನರಲ್ಲಿದೆ. ಹಾಗಾಗಿ ಅವರ ಮುಂದಿನ ಶಿಕ್ಷಣದ ಬಗ್ಗೆ ಆಸಕ್ತಿ ವಹಿಸುವುದಿಲ್ಲ. ಇವರಿಗೆ ಓದು ಎಂದರೆ ಕೇವಲ ಪಠ್ಯಪುಸ್ತಕಳನ್ನು ಓದುವುದಷ್ಟೇ ಆಗಿದ್ದು, ಹೊಸ ವಿಚಾರಗಳನ್ನು ಕಲಿಯಲು ತೆರೆದುಕೊಳ್ಳುವುದಿಲ್ಲ. ದಿನ ಪತ್ರಿಕೆಗಳನ್ನು ಓದುವ ಹವ್ಯಾಸ

ಇಟ್ಟುಕೊಂಡಿಲ್ಲ. ಸ್ಥಳೀಯವಾಗಿ ಲಭ್ಯವಿರುವ ಗ್ರಂಥಾಲಯ, ಸಂಪನ್ಮೂಲ ಕೇಂದ್ರಗಳನ್ನು ಬಳಕೆ ಮಾಡಿಕೊಳ್ಳುತ್ತಿಲ್ಲ.

ಶಿಕ್ಷಕ ಶಿಕ್ಷಣ ತರಬೇತಿ, ಪದವಿ ಹಾಗೂ ಉನ್ನತ ಶಿಕ್ಷಣ ಪಡೆದಿರುವ ಯುವಜನರು ಮಾತನಾಡುವುದು ಕಡಿಮೆ. ಅವರು ತಾವು ಪಡೆದಿರುವ ಶಿಕ್ಷಣವೇ ಸಾಕು ಎಂಬ ಮನೋಧೋರಣೆ ಹೊಂ



ದಿದ್ದು, ಬಿಡುವಿನ ಅವಧಿಯಲ್ಲಿ ಪರ್ಯಾಯ ಕಲಿಕೆಗೆ ತೆರೆದುಕೊಳ್ಳುವುದಿಲ್ಲ. ಮೆಟ್ರಿಕ್ ಮತ್ತು ಪಿಯುಸಿ ಹಂತದವರೆಗೆ ಓದಿ ಅನುತ್ತೀರ್ಣರಾದವರು ಅಥವಾ ಅರ್ಧದಲ್ಲೇ ಶಾಲೆ ಬಿಟ್ಟವರು ಹಾಗೂ ಹೊರಗೆ ಕೆಲಸ ಮಾಡುತ್ತಿರುವ ಯುವ ಜನರು ಮಾತನಾಡಲು ಆಸಕ್ತಿ ತೋರುತ್ತಾರೆ. ಅಲ್ಲದೆ ಅವರ ಸಂವಹನ ಕೌಶಲ್ಯ ಉತ್ತಮವಾಗಿದೆ. ಯುವ ಜನರು ಕಲೆ, ಕ್ರೀಡೆ, ಸಾಹಿತ್ಯ, ಸಾಂಸ್ಕೃತಿಕ ಹಾಗೂ ಗ್ರಾಮದ ವಿಶೇಷ ಅಂಶಗಳತ್ತ ಹೆಚ್ಚು ಗಮನ ಹರಿಸುತ್ತಿಲ್ಲ. ಮನರಂಜನೆಗಾಗಿ ಹಬ್ಬ ಮತ್ತು ಜಾತ್ರೆಯ ದಿನಗಳಲ್ಲಿ ತಮ್ಮ ಸಮುದಾಯದ ಹಾಡು, ಕುಣಿತಕ್ಕಿಂತ ಸಿನಿಮಾ ಹಾಡುಗಳಿಗೆ ಹೆಚ್ಚು ಮಾರುಹೋಗಿದ್ದಾರೆ. ಈ ಭಾಗದಲ್ಲಿ ಹಳ್ಳಿಯ ಯಾವುದೇ ಆಟಗಳು ಕಂಡು ಬರುತ್ತಿಲ್ಲ. ಆದರೆ ಶಾಲಾ ಕಾಲೇಜಿಗೆ ಹೋಗುವ ಮತ್ತು ಸ್ಥಳೀಯವಾಗಿ ಇರುವ ಕೆಲವ್ರು ಕ್ರಿಕೆಟ್, ವಾಲಿಬಾಲ್ ಆಟಗಳನ್ನು ಆಡುತ್ತಾರೆ. ಯುವಜನರಿಗೆ ಅವರ ಸಮುದಾಯ ಮತ್ತು ಸ್ಥಳೀಯ ಪರಿಸರದ ಬಗ್ಗೆ ಕಾಳಜಿ ಕಡಿಮೆ ಇದ್ದು, ಹಣ ಸಂಪಾದನೆಯ ಕೆಲಸಗಳ ಕಡೆ ಹೆಚ್ಚಿನ ಒಲವು ಹೊಂದಿದ್ದಾರೆ. ಗ್ರಾಮದ ಸಮಸ್ಯೆಗಳು ಮತ್ತು ಅಭಿವೃದ್ಧಿ ಕೆಲಸಗಳ ಬಗ್ಗೆ ಗ್ರಾಮದ ಹಿರಿಯರು ತೆಗೆದುಕೊಳ್ಳುವಷ್ಟು ಕಾಳಜಿಯನ್ನು ಯುವಜನರು ತೆಗೆದುಕೊಳ್ಳುವುದಿಲ್ಲ.

## ವಿವಿಧ ಸಮುದಾಯಗಳ ಯುವಜನರ ನಡುವೆ ಕಂಡು ಬರುವ ಭಿನ್ನತೆಗಳು

### ಲಂಬಾಣಿ ಸಮುದಾಯದ ಯುವಜನರು :

ಲಂಬಾಣಿ ಸಮುದಾಯದ ಬಹುತೇಕ ಯುವಜನರು ಮೆಟ್ರಿಕ್ ಮತ್ತು ಪದವಿ ಪೂರ್ವ ಶಿಕ್ಷಣದ (ಪಿಯುಸಿ) ಹಂತದಲ್ಲಿ ಅನುತ್ತೀರ್ಣರಾಗಿ ಅಥವಾ ಶಾಲೆಯನ್ನು ಅರ್ಧದಲ್ಲೇ ಬಿಡುವುದು ಸಾಮಾನ್ಯವಾಗಿದೆ. ಆದರೂ ಕೆಲವು ಯುವಕರು ಪದವಿ, ಡಿ.ಎಡ್, ಬಿ.ಎಡ್ ಶಿಕ್ಷಣ ಪಡೆದಿದ್ದು, ಸರ್ಕಾರಿ ಮತ್ತು ಖಾಸಗಿ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಇವರು ಕೆಲಸ ಮತ್ತು ವಿದ್ಯಾಭ್ಯಾಸಕ್ಕಾಗಿ ನಗರ ಪ್ರದೇಶಗಳ ಕಡೆ ವಲಸೆ ಹೋಗುತ್ತಾರೆ. ಕೆಲವ್ರು ಸ್ಥಳೀಯವಾಗಿ ಅಂಗಡಿ, ಹೋಟೆಲ್, ವಾಹನ ಚಾಲಕರಾಗಿ ಹಾಗೂ ಸಣ್ಣ ಪುಟ್ಟ ವ್ಯವಹಾರಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಕೆಲವರು ಸ್ವಂತ ಗೂಡ್ಸ್

ಆಟೋ ಮತ್ತು ಟ್ರ್ಯಾಕ್ಟರ್‌ಗಳನ್ನು ಹೊಂದಿದ್ದಾರೆ. ಈ ಸಮುದಾಯದ ಯುವಜನರು ಬಂಜಾರ, ಕನ್ನಡ, ತಮಿಳು, ಮಲೆಯಾಳಂ, ಹಿಂದಿ ಭಾಷೆಗಳನ್ನು ಮಾತನಾಡುತ್ತಿದ್ದು, ಸಂವಹನ ಕೌಶಲ್ಯ ಚನ್ನಾಗಿದೆ. ಇವರು ಫ್ಯಾಷನ್ ಉಡುಗೆ–ತೊಡುಗೆಗಳಿಗೆ ಹೆಚ್ಚು ಮಹತ್ವ ನೀಡುತ್ತಾರೆ. ಪ್ರೌಢಶಾಲಾ ಹಂತದ ಶಿಕ್ಷಣ ಮುಗಿಯುತ್ತಿದ್ದಂತೆ ಪೋಷಕರೇ ಆರ್ಥಿಕ ಸಂಪಾದನೆಯ ಕೆಲಸಗಳಲ್ಲಿ ತೊಡಗುವಂತೆ ಪ್ರೇರೆಪಿಸುತ್ತಾರೆ. ಈ ಸಮುದಾಯದ ಹೆಣ್ಣು ಮಕ್ಕಳು ಮೆಟ್ರಿಕ್ ಶಿಕ್ಷಣ ಮುಗಿಯುವುದರ ವೇಳೆಗೆ ಮದುವೆ ಆಗುವುದು ಸಾಮಾನ್ಯವಾಗಿದೆ. ಈ ಸಮುದಾಯದ ಮೂಕನಪಾಳ್ಯ, ವೀರಯ್ಯನಪುರ ಹಾಗೂ ಕೋಳಿಪಾಳ್ಯದ ಯುವಜನರು ಹೆಚ್ಚಾಗಿ ಕರ್ನಾಟಕದ ಬೆಂಗಳೂರು ಮತ್ತು ತಮಿಳುನಾಡಿನ ಕೊಯಮತ್ತೂರು ಮತ್ತು ಸೇಲಂ ಜಿಲ್ಲೆಗಳಿಗೆ ಕೆಲಸಕ್ಕಾಗಿ ವಲಸೆ ಹೋಗುತ್ತಾರೆ. ಬೆಂಗಳೂರಿನ ಮಾರ್ತಳ್ಳಿ, ಎಚ್‌ಎಎಲ್, ಬನಶಂಕರಿ ಪ್ರದೇಶಗಳ ಪುಟ್‌ಬಾತ್, ಬಸ್ ನಿಲ್ದಾಣಗಳಲ್ಲಿ ನಕಲಿ ಕ್ಯಾಸಟ್‌ಗಳನ್ನು ಮಾರಾಟ ಮಾಡುತ್ತಾರೆ. ಹಾಗಾಗಿ ಇವರಿಗೆ ಕ್ಯಾಸೆಟ್ ಮಾರಾಟ ಮಾಡಲು ಪೋಲಿಸರಿಗೆ ಪ್ರತಿಯೊಬ್ಬರು ಮಾಸಿಕ ಐದು ಸಾವಿರ ರೂಪಾಯಿಗಳು ಲಂಚ ನೀಡಬೇಕು. ಎಚ್‌ಎಎಲ್ ಪೋಲಿಸ್ ಠಾಣೆ ವ್ಯಾಪ್ತಿಯಲ್ಲಿ ಮಾರಾಟ ಮಾಡಿದರೆ ಪೋಲಿಸಿನವರಿಗೆ ಬಸೀರ್ ಎಂದು ಹೇಳಿದರೆ ಸಾಕು ಬಿಟ್ಟು ಬಿಡುತ್ತಾರಂತೆ. ಉಳಿದ ಕಡೆ ಪೋಲಿಸರ ಕಾಟ ಜಾಸ್ತಿ ಇದೆ. ಆದರೂ ಮಾರಾಟ ಮಾಡುವುದಾಗಿ ಕೆಲವು ಯುವಕರು ತಿಳಿಸಿದ್ದು, ಕೆಲವರಿಗೆ ಕೇಸ್ ದಾಖಲಿಸಿ ಈಗಲೂ ಅಲೆಯಬೇಕಾದ ಸ್ಥಿತಿ ಇದ್ದು, ವಕೀಲರಿಗೆ ಹಣ ನೀಡಬೇಕ್ಕಾಗಿದೆ ಎಂದು ತಿಳಿಸಿದ್ದಾರೆ. ಅಲ್ಲದೆ ೪–೫ ಯುವಜನರು ಸೇರಿ ಬಾಡಿಗೆ ರೂಂಗಾಗಿ ತಿಂಗಳಿಗೆ ಒಬ್ಬೊಬ್ಬರು ಸಾವಿರ ಅಥವಾ ಸಾವಿರದ ಐದುನೂರು ರೂಪಾಯಿಗಳನ್ನು ಬಾಡಿಗೆ ಕೊಡಬೇಕಿದ್ದು, ೨–೩ ದಿನಗಳಿಗೊಮ್ಮ ಮೂರ್‍ನಾಲ್ಕು ಜನರು ಸೇರಿ ವಾಷಿಂಗ್ ಮೆಸಿನ್‌ಗೆ ೫ ಕೆಜಿ ಬಟ್ಟೆ ಇದ್ದರೆ ೧೮೦ ರೂಪಾಯಿ ಕೊಡಬೇಕು. ನಮ್ಮ ಊಟ ತಿಂಡಿ ಹೀಗೆ ಎಲ್ಲಾ ಖರ್ಚುಗಳಿಗೂ ನಾವು ಸಂಪಾದನೆ ಮಾಡಿದ ಎಲ್ಲ ಹಣವನ್ನು ವ್ಯಯ ಮಾಡಬೇಕಾಗಿದೆ. ಮನೆಗಂತೂ ಹಣ ಕಳುಹಿಸಲು ಆಗುತ್ತಿಲ್ಲ. ಕೆಲವರು ಚೀಟಿ ಹಾಕಿಕೊಂಡು ಮನೆಗೆ ಹಣ ಕಳುಹಿಸಿ, ಸರಿದೂಗಿಸುತ್ತಾರೆ (ಮ್ಯೆಂಟನ್ ಮಾಡುತ್ತಾರೆ). ಕೆಲವು ಸಲ ಅಧಿಕಾರಿಗಳು ದಾಳಿ (ರೈಡ್) ಮಾಡುವಾಗ ೨ ರಿಂದ ೩ ತಿಂಗಳು ಕೆಲಸ ಇರುವುದಿಲ್ಲ. ಆಗ ಮನೆಗೆ ಬಂದುಬಿಡುವುದಾಗಿ ತಿಳಿಸಿದ್ದಾರೆ.

ಈ ಭಾಗದ ಯುವಕ ಸಂಘಗಳು ಹಬ್ಬ–ಹರಿದಿನಗಳಿಗೆ ಸೀಮಿತವಾಗಿವೆ. ಯುವ ಜನರಲ್ಲಿ ಲಿಂಗಭೇದದ ಸಮಸ್ಯೆಗಳಿದ್ದು, ಯಾವುದೇ ಸಭೆ, ಕಾರ್ಯಕ್ರಮಗಳಲ್ಲಿ ಒಟ್ಟಾಗಿ ಸೇರುವುದಿಲ್ಲ. ಯಾವುದೇ ಸಭೆ ಮತ್ತು ಕಲಿಕಾ ಚಟುವಟಿಕೆಗಳಿಗೆ ಆಹ್ವಾನಿಸಿದಾಗ ಪಾಲ್ಗೊಳ್ಳುವುದು ಬಹಳ ಕಡಿಮೆ. ಕ್ರೀಡೆಗಳಲ್ಲಿ ತೊಡಗಿಸಿಕೊಳ್ಳುವುದು ಅಪರೂಪವಾಗಿದ್ದು, ಹಬ್ಬ, ಜಾತ್ರೆಗಳ ಸಂದರ್ಭಗಳಲ್ಲಿ ಆಧುನಿಕ



ಸಿನಿಮಾ ಹಾಡುಗಳಿಗೆ ಹೆಜ್ಜೆ ಹಾಕುತ್ತಾರೆ. ಇವರು ಸರ್ಕಾರಿ ಸೌಲಭ್ಯಗಳನ್ನು ಬಳಸಿಕೊಳ್ಳುವಲ್ಲಿ, ತಮಗೆ ಅವಶ್ಯಕತೆ ಇರುವ ಕಾಗದ ಪತ್ರಗಳನ್ನು ಮಾಡಿಸುವಲ್ಲಿ ಮುಂಚೂಣಿಯಲ್ಲಿರುತ್ತಾರೆ. ಬ್ಯಾಂಕಿಂಗ್ ವ್ಯವಹಾರದಲ್ಲೂ ನಿಪುಣತೆ ಹೊಂದಿದ್ದಾರೆ. ಈ ಸಮುದಾಯದ ವಿದ್ಯಾವಂತ ಯುವಜನರು ಪಂಚಾಯಿತಿಯಲ್ಲಿ ಜನಪ್ರತಿನಿಧಿಗಳಾಗಿ ಚುನಾಯಿತರಾಗಿದ್ದಾರೆ. ಉದಾಹರಣೆಗೆ ರಂಗಸಂದ್ರದ ಉಲ್ಲಾಸನಾಯ್ಕ ಇವರು ಪಿಯುಸಿ ಓದಿದ್ದು, ಕೆ.ಗುಡಿ ಗ್ರಾಮ ಪಂಚಾಯಿತಿ ಸದಸ್ಯರಾಗಿದ್ದಾರೆ. ಇದೇ ಗ್ರಾಮದ ರಮೇಶನಾಯ್ಕ ಇವರು ಬಿಬಿಎಂ ವ್ಯಾಸಂಗ ಮಾಡುತ್ತಿದ್ದು, ರಂಗಸಂದ್ರ ಗ್ರಾಮ ಪಂಚಾಯಿತಿ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.

**ಗಿರಿಜನ ಸಮುದಾಯದ ಯುವಜನರು :**

ಗಿರಿಜನ ಸಮುದಾಯದ ಯುವಜನರು ಕೆಲವೊಮ್ಮೆ ತಮ್ಮ ಗ್ರಾಮಗಳಲ್ಲಿ ಕಾಣ ಸಿಗುತ್ತಾರೆ. ನಂತರದ ಭೇಟಿಗಳಲ್ಲಿ ಅವರ ಬಗ್ಗೆ ವಿಚಾರಿಸಿದರೆ ಕೇರಳ, ತಮಿಳುನಾಡಿಗೆ ಹೋಗಿರುವ ಬಗ್ಗೆ ಮಾಹಿತಿ



ಲಭಿಸುತ್ತದೆ. ಇವರಲ್ಲಿ ಹೆಚ್ಚಿನವರು ಪ್ರಾಥಮಿಕ (೫–೭) ಮತ್ತು ಪ್ರೌಢ ಶಾಲಾ ಹಂತಕ್ಕೆ (೮–೯) ಶಾಲೆ ಬಿಟ್ಟವರಾಗಿದ್ದಾರೆ. ಬಾನವಾಡಿ ಗ್ರಾಮದ ನಾಲ್ಕು ಯುವತಿಯರು ಪದವಿಪೂರ್ವ ಶಿಕ್ಷಣ ಪಡೆಯುತ್ತಿದ್ದು, ಗೋಡೆಮಡು ಗ್ರಾಮದ ಒಬ್ಬ ಯುವತಿ ದಾದಿಯಾಗಿ (ನರ್ಸಿಂಗ್) ಕೆಲಸ ನಿರ್ವಹಿಸುತ್ತಿದ್ದಾರೆ. ಇರಲ್ಲಿ ಲಿಂಗಬೇಧದ ಸಮಸ್ಯೆಗಳು ಅಷ್ಟಾಗಿ ಕಂಡು ಬರುವುದಿಲ್ಲ. ವಿವಾಕ್ಕೆ ಸಂಬಂಧಿಸಿದಂತೆ ಮುಕ್ತತೆ ಇರುವುದರಿಂದ ಹೆಣ್ಣು ಮಕ್ಕಳಲ್ಲಿ ೧೩ ರಿಂದ ೨೦ ವರ್ಷ, ಗಂಡು ಮಕ್ಕಳಲ್ಲಿ ೧೭ ರಿಂದ ೨೫ ವಯೋಮಾನದ ಒಳಗೆ ಮದುವೆ ಆಗುತ್ತಾರೆ. ಯುವಜನರು ಹೊರಗಿನ ಕೂಲಿ ಕೆಲಸಗಳಲ್ಲಿ ಹೆಚ್ಚು ತೊಡಗಿಸಿಕೊಂಡಿದ್ದಾರೆ. ಇವರಲ್ಲೂ ಸಹ ಇತರೆ ಯುವಜನರಂತೆ ಫ್ಯಾಷನ್, ಮೊಬೈಲ್ ಬಳಕೆ ಹೆಚ್ಚಾಗಿದ್ದು, ಧೂಮಪಾನ (ಬೀಡಿ, ಸಿಗರೇಟ್, ಬಂಗಿ, ಗುಟ್ಕಾ, ಅನ್ಸ್) ಹಾಗೂ ಮಧ್ಯಪಾನದ ಪ್ರಭಾವಕ್ಕೆ ಹೆಚ್ಚು ಒಳಗಾಗಿದ್ದಾರೆ. ಇಲ್ಲಿನ ಯುವಜನರು ತಮ್ಮ ಗ್ರಾಮದಲ್ಲಿ ಹಲವು ಸಮಸ್ಯೆಗಳಿದ್ದರೂ ಆ ಬಗ್ಗೆ ಪ್ರಶ್ನೆ ಎತ್ತುವುದಿಲ್ಲ. ಹೇಗಾದರೂ ಸರಿ ಹೊಂದಾಣಿಕೆ ಮಾಡಿಕೊಂಡು ಹೋಗುವ ಮನೋಭಾವ ಇದೆ. ಅರಣ್ಯ ಪರಿಸರ, ಪ್ರಾಣಿ–ಪಕ್ಷಿಗಳ ಬಗ್ಗೆ ಹೆಚ್ಚಿನ ಅರಿವು ಇದ್ದು, ಸ್ಥಳೀಯ ಜ್ಞಾನ ಉತ್ತಮವಾಗಿದೆ. ಅಲ್ಲದೆ ಅವರು ಕಾಡಿನ ಉಪ ಉತ್ಪನ್ನಗಳನ್ನು ಸಂಗ್ರಹಿಸುವ ಕೌಶಲ್ಯ ಹೊಂದಿದ್ದು, ಅದಕ್ಕೆ ಯಾವುದೇ ಶಿಕ್ಷಣ ಅಥವಾ ಪದವಿ ಬೇಕಾಗಿಲ್ಲ ಎಂಬ ಭಾವನೆ ಇದೆ.

ಈ ಸಮುದಾಯದ ಯುವಜನರಲ್ಲಿ ಹಿಂಜರಿಕೆ ಮನೋಭಾವವಿದ್ದು, ಪ್ರಶ್ನಿಸುವುದು ಕಡಿಮೆ. ಕಾಲೇಜು ವ್ಯಾಸಂಗ ಮಾಡುತ್ತಿರುವ ಯುವತಿಯರೂ ಸೇರಿದಂತೆ ಇತರೆ ಹೆಣ್ಣು ಮಕ್ಕಳು

ಹೊರಗಿನವರನ್ನು (ಪರಿಚಯದ ನಂತರವೂ) ಕಂಡ ತಕ್ಷಣ ನಾಚಿಕೆಯಿಂದ ಮನೆಯ ಒಳಗೆ ಸೇರಿಕೊಂಡು ಮಾತನಾಡಲು ಸಂಕೋಚಪಡುತ್ತಾರೆ. ಕಲಿಕೆ ಬಗ್ಗೆ ಅಷ್ಟೇನೂ ಆಸಕ್ತಿ ತೋರುವುದಿಲ್ಲ. ಆದರೆ ಅವರ ಹಬ್ಬ ಮತ್ತು ಜಾತ್ರೆಗಳಲ್ಲಿ ಮುಕ್ತವಾಗಿ ಸಿನಿಮಾ ಹಾಡುಗಳಿಗೆ ನೃತ್ಯ ಮಾಡುತ್ತಾರೆ. ಮನರಂಜನೆಗಾಗಿ ಸಿನಿಮಾ, ಟಿವಿ ಮೂಲಕ ಕನ್ನಡ ಮತ್ತು ತಮಿಳು ಸಿನಿಮಾಗಳನ್ನು ಹೆಚ್ಚಾಗಿ ನೋಡುತ್ತಾರೆ. ಇವರು ಒಂದೇ ಕಡೆ ಇದ್ದು ಕೆಲಸ ಮಾಡಲು ಇಷ್ಟಪಡುವುದಿಲ್ಲ. ಸ್ವಯಂ ಆಗಿ ತಮ್ಮ ಕೆಲಸಗಳನ್ನು ತಾವೇ ಮಾಡಿಕೊಳ್ಳವ ಸ್ಥಿತಿಯಲಿಲ್ಲ. ಉದಾ: ಸರ್ಕಾರದ ಯಾವುದಾದರೂ ಸೌವಲತ್ತುಗಳನ್ನು ಪಡೆದುಕೊಳ್ಳಲು ಬೇಕಾದ ಜಾತಿ, ಆದಾಯ ಪ್ರಮಾಣ ಪತ್ರ, ಪಡಿತರ ಚೀಟಿಗಳನ್ನು ಪಡೆಯಲು ತಮ್ಮ ಪೋಷಕರು ಅಥವಾ ಆ ಬಗ್ಗೆ ತಿಳಿದಿರುವ ಮಧ್ಯವರ್ತಿಗಳನ್ನು ಅವಲಂಬಿಸಿರುತ್ತಾರೆ. ಯಾವುದೇ ಚರ್ಚೆಗೆ ಕೂಗಿದರೆ ನಿಮ್ಮ ಹಿಂದೆಯೇ ಬರುತ್ತೇನೆ ಎನ್ನುತ್ತಾರೆ ವಿನಃ ಬರುವುದಿಲ್ಲ. ಹಿಂದೆ ಕೆಲಸ ಮಾಡಿರುವ ಸಂಘ, ಸಂಸ್ಥೆಗಳು ಸಭೆ ಮತ್ತು ತರಬೇತಿ ಮಾಡುವಾಗ ಸಹಾಯಧನ, ಆ ದಿನದ ಕೆಲಸದ ವೇತನವನ್ನು ನೀಡಿ ರೂಢಿ ಮಾಡಿದ್ದು, ಸಭೆ ಅಥವಾ ತರಬೇತಿಗೆ ಬಂದರೆ ಕೂಲಿ ಕೊಡುತ್ತೀರಾ ಎಂದು ಕೇಳುತ್ತಾರೆ.

## ಮುಸ್ಲಿಂ ಸಮುದಾಯದ ಯುವ ಜನರು

ಮುಸ್ಲಿಂ ಸಮುದಾಯದ ಯುವಜನರಲ್ಲಿ ಶಿಕ್ಷಣ ಪಡೆದವರು ತುಂಬಾ ಕಡಿಮೆ ಇದ್ದು, ನಾಲ್ಕೈದು ಯುವಜನರು ಮಾತ್ರ ಮೆಟ್ರಿಕ್ ಶಿಕ್ಷಣ ಮತ್ತು ಒಬ್ಬರು ಬಿ.ಎಡ್ ಮಾಡುತ್ತಿದ್ದಾರೆ. ಇವರು ಹೆಚ್ಚು ವ್ಯಾಪಾರ–ವ್ಯವಹಾರದ ಬಗ್ಗೆ ಆಸಕ್ತಿ ಹೊಂದಿದ್ದಾರೆ. ಇವರಿಗೆ ಮನೆಯಿಂದಲೇ ಕೆಲವು ವೃತ್ತಿ ಕೌಶಲ್ಯಗಳನ್ನು ಕಲಿಸುವುದರಿಂದ (ಟೇಲರಿಂಗ್, ಡ್ರೈವಿಂಗ್, ವ್ಯಾಪಾರ, ಗ್ಯಾರೇಜ್) ಶಿಕ್ಷಣದ ಬಗ್ಗೆ ಹೆಚ್ಚಿನ ಆಸಕ್ತಿ ತೋರುವುದಿಲ್ಲ. ಕೆಲವರಿಗೆ ಭೂಮಿ ಇದ್ದರೂ ಕೃಷಿ ಕೆಲಸಗಳಲ್ಲಿ ತೊಡಗಿಸಿಕೊಳ್ಳುವುದಿಲ್ಲ. ಲಭ್ಯವಿರುವ ಯುವ ಜನರನ್ನು ಭೇಟಿ ಮಾಡಿ ಚರ್ಚೆ ಮಾಡಿದರೂ ಕಲಿಕೆಯ ಚಟುವಟಿಕೆಗಳಲ್ಲಿ ಭಾಗವಹಿಸುವುದಿಲ್ಲ, ಹೆಣ್ಣು ಮಕ್ಕಳ ಶಿಕ್ಷಣ ಮೆಟ್ರಿಕ್ ಹಂತಕ್ಕೆ ಸೀಮಿತವಾಗಿದ್ದು, ಮದುವೆ ಮಾಡುವ ಕಡೆ ಗಮನ ಹರಿಸುತ್ತಾರೆ. ಪುಣಜನೂರಿನಲ್ಲಿ ಒಬ್ಬ ಯುವತಿ ಡಿ.ಎಡ್ ಮಾಡಿದ್ದಾರೆ.

## ಬಡಗ ಸಮುದಾಯದ ಯುವ ಜನರು

ಬಡಗ ಸಮುದಾಯವು ಪುಣಜನೂರಿನಲ್ಲಿ ಮಾತ್ರ ಕಂಡುಬರುತ್ತಿದ್ದು, ಮೆಟ್ರಿಕ್, ಪದವಿಪೂರ್ವ ಹಾಗೂ ಪದವಿ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಈ ಸಮುದಾಯದ ಯುವತಿಯರು ಸೇಲಂ, ತಿರುಪೂರು ಗಾರ್ಮೆಂಟ್ಸ್‌ಗಳಲ್ಲಿ ಕೆಲಸ ಮಾಡಿ, ಬೇಸತ್ತು ವಾಪಸ್ಸಾಗಿದ್ದಾರೆ. ಇತರೆ ಸಮುದಾಯಗಳಿಗೆ ಹೋಲಿಸಿದಾಗ ಈ ಸಮುದಾಯದ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹಿಸುತ್ತಾರೆ. ಇಲ್ಲಿನ ಹೆಚ್ಚು ಯುವ ಜನರು ತಮಿಳುನಾಡಿನ ಬೇಕರಿ, ಹೋಟೆಲ್, ಗಾರ್ಮೆಂಟ್‌ಗಳಲ್ಲಿ ಕೆಲಸ ಮಾಡುತ್ತಾರೆ. ಇವರಲ್ಲಿ ವಲಸೆ ಹೆಚ್ಚಿನ ಪ್ರಮಾಣದಲ್ಲಿದ್ದು, ತಮಿಳು ಸಿನಿಮಾ ಮತ್ತು ಭಾಷೆ ಬಗ್ಗೆ ಹೆಚ್ಚಿನ ಆಸಕ್ತಿ ಹೊಂದಿದ್ದಾರೆ. ಭೂಮಿ ಇರುವ ಕುಟುಂಬಗಳಲ್ಲಿ ವ್ಯವಸಾಯವನ್ನು ತಂದೆ – ತಾಯಿ ನೋಡಿಕೊಳ್ಳುತ್ತಾರೆ.

ಪುಣಜನೂರು ಪಂಚಾಯಿತಿಯ ಗ್ರಾಮಗಳಲ್ಲಿ ಸ್ವಲ್ಪ ಪ್ರಮಾಣದಲ್ಲಿ ಲಿಂಗಾಯಿತರು, ಮಡಿವಾಳರು, ಈಡಿಗ, ನಾಯಕ ಸಮುದಾಯದ ಕುಟುಂಬಗಳಿವೆ. ಈ ಸಮುದಾಯಗಳಲ್ಲಿ ಬಹಳ ಕಡಿಮೆ ಯುವ ಜನರಿದ್ದು, ವಿವಿಧ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ.

## ಯುವಜನರ ಸಮಸ್ಯೆ ಮತ್ತು ಸವಾಲುಗಳು :

- ಯುವಜನರಿಗೆ ಓದು ಬರಹ ಮತ್ತು ಕಲಿಕಾ ಸಮಸ್ಯೆಗಳಿಂದ ವಿದ್ಯಾಭ್ಯಾಸವನ್ನು ಮುಂದುವರಿಸಲು ಸಾಧ್ಯವಾಗುತ್ತಿಲ್ಲ.
- ಕುಟುಂಬದವರಿಂದ ಯುವತಿಯರಿಗೆ ಶೈಕ್ಷಣಿಕ ಅವಕಾಶ ಹಾಗೂ ಇತರೆ ಕಲಿಕೆಗಳಲ್ಲಿ ತೊಡಗಿಸಿಕೊಳ್ಳಲು ಮುಕ್ತ ಪ್ರೋತ್ಸಾಹ ಹಾಗೂ ಸಹಕಾರ ಇಲ್ಲ.
- ಯುವಜನರಿಗೆ ಓದುವ, ಹೊಸ ವಿಷಯಗಳು ಮತ್ತು ಕೌಶಲ್ಯಗಳನ್ನು ಕಲಿಯುವ ವಾತಾವರಣವಿಲ್ಲ. ಕೆಲವರಿಗೆ ತಾವು ಏನು ಕಲಿಯಬೇಕು, ಯಾವ ರೀತಿಯ ನೆರವು ಬೇಕೆಂಬುದರ ಬಗ್ಗೆ ಮಾತನಾಡಲು ಸಾಧ್ಯವಾಗುತ್ತಿಲ್ಲ.
- ಯುವಜನರಿಗೆ ಶೈಕ್ಷಣಿಕ ಹಾಗೂ ವೃತ್ತಿ ಮಾರ್ಗದರ್ಶನದ ಕೊರತೆ ಇದ್ದು, ಹಳ್ಳಿ ಬಿಟ್ಟು ನಗರ ಪ್ರದೇಶಗಳ ಕಡೆ ವಲಸೆ ಹೋಗುತ್ತಿದ್ದಾರೆ.
- ಕುಟುಂಬದ ಆರ್ಥಿಕ, ಸಮಾಜಿಕ ಹಾಗೂ ಸಾರಿಗೆ ಸಂಪರ್ಕದ ಸಮಸ್ಯೆಗಳಿಂದ ವಿದ್ಯಾಭ್ಯಾಸದ ಮುಂದುವರಿಕೆಗಾಗಿ ಅಡೆತಡೆಯಾಗಿದೆ.
- ಕೃಷಿಯಲ್ಲಿ ಯುವಜನರಿಗೆ ಭರವಸೆ ಇಲ್ಲದಿರುವ ಕಾರಣ ಕೃಷಿ ಬಗ್ಗೆ ಏನಾದರೂ ಕಾರ್ಯಕ್ರಮಗಳನ್ನು ಆಯೋಜಿಸುವ ಬಗ್ಗೆ ಚರ್ಚಿಸಿದರೆ, ವಿಷಯಗಳನ್ನು ತಿಳಿಯುವ ಮತ್ತು ಭಾಗವಹಿಸುವ ಆಸಕ್ತಿ ತೋರುವುದಿಲ್ಲ.
- ಯುವ ಜನರಲ್ಲಿ ಸ್ಥಳೀಯ ಪರಿಸರವನ್ನು ಅರ್ಥಮಾಡಿಕೊಂಡು, ತಾವು ಕಲಿತ ಶಿಕ್ಷಣವನ್ನು ತಮ್ಮ ಸಮಾಜದಲ್ಲಿ ಅಳವಡಿಸಿಕೊಂಡು ಬದುಕಲು ಆಗುತ್ತಿಲ್ಲ.
- ಉನ್ನತ ಶಿಕ್ಷಣ ಪಡೆದಿದ್ದರೂ ಸರ್ಕಾರಿ ಕೆಲಸ ಸಿಗದಿರುವುದರಿಂದ ನಿರಾಸೆಯಾಗಿದ್ದಾರೆ. ಅವರು ಓದಿರುವುದು ಕೇವಲ ಸರ್ಕಾರಿ ಕೆಲಸಕ್ಕಾಗಿ ಎಂದುಕೊಂಡಿದ್ದು, ಇನ್ಯಾವುದೇ ರೀತಿಯ ಕೌಶಲ್ಯಗಳನ್ನು ಅವರು ಪಡೆದಿರುವುದಿಲ್ಲ.
- ಸಮಾಜ ಮತ್ತು ಕುಟುಂಬ ಯುವಜನರನ್ನು ಮುಖ್ಯ ಎಂದು ಪರಿಗಣಿಸದಿರುವುದು.

**ಯುವಜನರ ನೀರೀಕ್ಷೆಗಳು :**

- ಯುವಜನರು ಖಾಯಂ ಹಾಗೂ ನಿರಂತರವಾದ ಸರ್ಕಾರಿ ಮತ್ತು ಖಾಸಗಿ ಕೆಲಸಗಳನ್ನು ಬಯಸುತ್ತಾರೆ ಹಾಗೂ ನೆರಳಲ್ಲಿ ಕುಳಿತು ಕೆಲಸ ಮಾಡುವುದನ್ನು ಹೆಚ್ಚು ಇಷ್ಟಪಡುತ್ತಾರೆ.
- ಯಾವುದೇ ಒಂದು ತರಬೇತಿ ಪಡೆದ ನಂತರ ಏನು ಉಪಯೋಗವಿದೆ, ಉದ್ಯೋಗ ಸಿಗುತ್ತಾ, ತರಬೇತಿ ನೀಡುವಾಗ ಹಣಕಾಸಿನ ಸೌಲಭ್ಯಗಳು ಇವೆಯೇ ಎಂದು ಕೇಳುತ್ತಾರೆ.
- ಮೆಟ್ರಿಕ್ ಮತ್ತು ಪಿಯುಸಿ ಫೇಲ್ ಆದ ಕೆಲವು ಯುವಜನರು ತಮ್ಮ ಶಿಕ್ಷಣವನ್ನು ಮುಂದುವರಿಸಲು ಟ್ಯೂಷನ್ ನಿರೀಕ್ಷೆಯಲ್ಲಿದ್ದಾರೆ.
- ಸ್ಥಳೀಯವಾಗಿ ಕಾಲೇಜು ಆರಂಭಗೊಂಡರೆ ಶಿಕ್ಷಣ ಮುಂದುವರಿಸಬಹುದು ಎಂಬ ನಿರೀಕ್ಷೆ ಇದೆ.
- ಯುವ ಜನರು ಟೇಲರಿಂಗ್, ಇಂಗ್ಲೀಷ್, ಕಂಪ್ಯೂಟರ್, ಡ್ರೈವಿಂಗ್ ಕಲಿಕೆ ಬಗ್ಗೆ ಆಸಕ್ತಿ ಹೊಂದಿದ್ದಾರೆ.
- ಊರಿನ ಸಮಸ್ಯೆಗಳ ಬಗ್ಗೆ ಕೆಲವು ಯುವ ಜನರು ಹಲವು ಪ್ರಶ್ನೆಗಳನ್ನು ಎತ್ತುತ್ತಿದ್ದಾರೆ. ಪಂಚಾಯಿತಿ ಬಗ್ಗೆ ಯುವ ಜನರಲ್ಲಿ ಉತ್ತಮ ಅಭಿಪ್ರಾಯ ಇಲ್ಲವಾಗಿದ್ದು, ಭ್ರಷ್ಟಚಾರ, ಪಕ್ಷಪಾತ ಇವುಗಳಿಂದ ಬೇಸತ್ತಿದ್ದಾರೆ.

ಯುವಜನರು ತಮ್ಮ ಮನೆಯ ಆರ್ಥಿಕ ನಿರ್ವಹಣೆಗಾಗಿ ಉದ್ಯೋಗದ ಅವಕಾಶಗಳನ್ನು ಹುಡುಕಿಕೊಂಡು ಹೊರಗೆ ಹೋಗಿ ದುಡಿಯುವುದು ಸಾಮಾನ್ಯವಾಗಿದೆ. ಈ ರೀತಿ ಹೊರಗೆ ಹೋಗುವ ಯುವ ಜನರಿಗೆ ಉದ್ಯೋಗ ಭದ್ರತೆ ಹಾಗೂ ಜೀವನ ನಿರ್ವಹಣೆಗೆ ಬೇಕಾದ ವೇತನ ಸಿಗದಿರುವುದು, ಹೆಚ್ಚು ಸಮಯ ದುಡಿಮೆಯಿಂದ ಅವರ ಆರೋಗ್ಯದ ಕಡೆ ಗಮನ ನೀಡದಿರುವುದು ಕಂಡು ಬರುತ್ತದೆ. ಈ ರೀತಿಯ ಸಮಸ್ಯೆಗಳಿಂದಾಗಿ ಯುವ ಜನರು ದೈಹಿಕ ಮತ್ತು ಮಾನಸಿಕ ಒತ್ತಡ, ಖಿನ್ನತೆ ಹಾಗೂ ಹಲವು ಕಾಯಿಲೆಗಳಿಗೆ ಒಳಗಾಗುತ್ತಾರೆ. ಅಲ್ಲದೆ ಹಲವರಾರು ದುಶ್ಚಟಗಳಿಗೆ ಬಲಿಯಾಗುವುದು, ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಗಾರ್ಮೆಂಟ್ಸ್‌ಗಳಲ್ಲಿ ದುಡಿಯುವ ಯುವ ಜನರನ್ನು ಕುರಿತ ಪ್ರತಿಕಾ ವರದಿಯನ್ನು ಇಲ್ಲಿ ನೀಡಲಾಗಿದೆ.

## ಗಾರ್ಮೆಂಟ್ಸ್‌ಗಳಲ್ಲಿ ದುಡಿಯುವ ಯುವ ಜನರ ಆತ್ಮಹತ್ಯೆ ಪ್ರಕರಣಗಳ ಪತ್ರಿಕಾ ವರದಿ

ಅಧ್ಯಯನವೊಂದರ ವರದಿಯಂತೆ ತಮಿಳುನಾಡಿನ ತಿರುಪೂರಿನ ಕಳೆದ ಎರಡು ವರ್ಷಗಳಲ್ಲಿ ೧,೦೦೦ ಗಾರ್ಮೆಂಟ್ಸ್ ನೌಕರರು ಆತ್ಮಹತ್ಯೆಗೆ ಶರಣಾಗಿದ್ದು, ಬಡತನ, ಹೆಚ್ಚುವರಿ ಕೆಲಸದ ಒತ್ತಡ, ಉದ್ಯೋಗದ ಅಭದ್ರತೆ, ಸಾಲ, ಖಾಸಗಿ ಹಣಕಾಸು ನೀಡುವವರಿಂದ ಅಥವಾ ಅವರ ಗೂಂಡಾಗಳಿಂದ ಕಿರುಳ ಪ್ರಮುಖ ಕಾರಣಗಳಾಗಿವೆ. ತಿರುಪೂರು ಕಳೆದೆರಡು ದಶಕಗಳಲ್ಲಿ ಜವಳಿ ಉದ್ಯಮದಲ್ಲಿ ದೇಶದ

ಗಮನ ಸೆಳೆದಿದೆ. ರಫ್ತಾಗುತ್ತಿರುವ ಭಾರತದ ಹತ್ತಿ ಉಡುಪುಗಳಲ್ಲಿ ತಿರುಪುರಿನ ಪಾಲು ಶೇಕಡ ೯೦ ರಷ್ಟಿದೆ. ಇದರಿಂದ ಈ ಪ್ರದೇಶದಲ್ಲಿ ಶೇಕಡ ೩೦ ರಷ್ಟು ಜನಸಂಖ್ಯೆ ಅಧಿಕಾವಾಗಿದ್ದು, ತಮಿಳುನಾಡಿನಲ್ಲಿ ತಿರುಪೂರು ವೇಗವಾಗಿ ಬೆಳೆಯುತ್ತಿರುವ ನಗರವಾಗಿದೆ. ಆದರೆ ಕೋಟ್ಯಾಂತರ ರೂಪಾಯಿಗಳ ವಹಿವಾಟು ನಡೆಸುತ್ತಿರುವ ಜವಳಿ ಉದ್ಯಮದ ಕಾರ್ಮಿಕರ ಸ್ಥಿತಿ ಚಿಂತಾಜನಕವಾಗಿದ್ದು, ಈ ಕುಟುಂಬಗಳು ತೀವ್ರ ಹತಾಶೆಯಿಂದ ಬಳಲುತ್ತಿವೆ. ಈ ನಗರದಲ್ಲಿ ಪ್ರತಿ ತಿಂಗಳು ಸುಮಾರು ೪೦ ರಿಂದ ೬೦ ಗಾರ್ಮೆಂಟ್ ಕಾರ್ಮಿಕರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಕಳೆದ ೨೦೧೦ ರ ಸೆಪ್ಟೆಂಬರ್‌ಗೆ ಹಿಂದಿನ ಎರಡು ವರ್ಷಗಳ ಅಂಕಿ-ಅಂಶಗಳ ಪ್ರಕಾರ ೯೧೦ ಕಾರ್ಮಿಕರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಇವರಲ್ಲಿ ಪತಿ-ಪತ್ನಿ, ಮಕ್ಕಳು ಅಥವಾ ಹತ್ತಿರದ ಸಂಬಂಧಿಗಳು ಸೇರಿದ್ದಾರೆ. ಆತ್ಮಹತ್ಯೆ ಮಾಡಿಕೊಂಡವರಲ್ಲಿ ಬಹುತೇಕರು ವಯಸ್ಕರಾಗಿದ್ದು ೨೦ ರಿಂದ ೪೦ ರ ಹರೆಯದವರಾಗಿರುತ್ತಾರೆ. ೨೦೦೯ ರಲ್ಲಿ ೪೯೫, ೨೦೧೦ ರ ಮೊದಲ ಆರು ತಿಂಗಳಲ್ಲೇ ೩೫೦ ಮಂದಿ ಆತ್ಮಹತ್ಯೆಗೆ ಶರಣಾಗಿದ್ದಾರೆ. ಜೂನ್ ನಿಂದ ಆಗಸ್ಟ್ ೨೦೧೦ ರವರೆಗೆ ೨೫೦ ಗಾರ್ಮೆಂಟ್ಸ್ ಕಾರ್ಮಿಕರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಈ ಬೆಳವಣಿಗೆಗಳ ನಡುವೆ ಕಳೆದ ಆರು ತಿಂಗಳಲ್ಲಿ ೨೫,೦೦೦ ಉದ್ಯೋಗ ಕಡಿತವಾಗಿದೆ. ಇದರಿಂದ ಕಾರ್ಮಿಕರ ವೇತನದಲ್ಲೂ ಕಡಿತ ಮತ್ತು ಹೆಚ್ಚು ಕೆಲಸದ ಒತ್ತಡವು ಕಾರ್ಮಿಕರಿಗಿದೆ. ಆಹಾರ ಸಾಮಗ್ರಿಗಳು ಮತ್ತು ಅವಶ್ಯಕ ವಸ್ತುಗಳ ಬೆಲೆ ನಗರದಲ್ಲಿ ತೀವ್ರ ಅಧಿಕವಾಗಿದ್ದು, ವಾಸ್ತವ್ಯದ ವೆಚ್ಚವೂ ಕಾರ್ಮಿಕರ ಬದುಕನ್ನು ದುಸ್ಥರವಾಗಿಸಿವೆ. ಆರೋಗ್ಯ ರಕ್ಷಣೆಗಾಗಿ ಕಾರ್ಮಿಕರು ತಮ್ಮದೇ ಹಣವನ್ನು ವ್ಯಯಿಸಬೇಕಾಗಿದ್ದು, ಬಹುತೇಕ ಕಾರ್ಮಿಕರು ಆರ್ಥಿಕ ಸಂಕಷ್ಟದಲ್ಲಿ ಬಳಲುತ್ತಿದ್ದು, ತಮ್ಮ ಮನೆಗಳಿಗೂ ಸಹಾಯ ಮಾಡಬೇಕಾಗಿದೆ. ದಿನದಲ್ಲಿ ೧೨ ರಿಂದ ೧೬ ಗಂಟೆಗಳ ವರೆಗೆ ದುಡಿದರೂ ತಮ್ಮ ಆದ್ಯತೆಗಳಿಗೆ ಬೇಕಾಗುವಷ್ಟು ಸಂಪಾದನೆ ಮಾಡಲು ಸಾಧ್ಯವಾಗುತ್ತಿಲ್ಲ (ವಾರ್ತಾಭಾರತಿ ದಿನ ಪತ್ರಿಕೆ, ಬೆಂಗಳೂರು : ಜನವರಿ ೦೪, ೨೦೧೧, ಪು-೮).

## ಯುವಜನರನ್ನು ಕುರಿತು ಗ್ರಾಮಸ್ಥರು ಹಾಗೂ ಪೋಷಕರ ಅಭಿಪ್ರಾಯಗಳು

ಭೇಟಿ ಮಾಡಿದ ಗ್ರಾಮಸ್ಥರು, ಪೋಷಕರು, ಮುಖಂಡರು ಯುವಜನರನ್ನು ಕುರಿತು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಇಲ್ಲಿನ ಬಹುತೇಕ ಯುವಜನರು ತಿರುಪೂರು, ಸೇಲಂ, ಕೇರಳ, ಬೆಂಗಳೂರು ಮುಂತಾದ ಕಡೆ ಕೆಲಸ ಮಾಡಲು ಹೋಗುತ್ತಾರೆ. ಅಲ್ಲಿ ಯುವ ಜನರು ಮಾಡುವ ಕೆಲಸಗಳೆಂದರೆ ಗಾರ್ಮೆಂಟ್ಸ್ ಕೆಲಸ, ಗಾರೆ ಕೆಲಸ, ಕಾಲುವೆ ಮತ್ತು ಕಟ್ಟಡದ ಕೆಲಸಗಳು, ಕ್ಯಾಸೆಟ್, ಡಿವಿಡಿಗಳ ಮಾರಾಟ, ಬೇಕರಿ ಮತ್ತು ಹೋಟೆಲ್‌ಗಳಲ್ಲಿ ಕೆಲಸ ಮಾಡುತ್ತಿರುವ ಬಗ್ಗೆ ತಿಳಿಸಿದ್ದಾರೆ. ಹೀಗೆ ಕೆಲಸ ಮಾಡಲು ಹೋದವರು ೨-೩ ತಿಂಗಳಿಗೊಮ್ಮೆ ಹಾಗೂ ಹಬ್ಬ-ಹರಿದಿನ, ಇತರೆ ವಿಶೇಷ ಕಾರ್ಯಕ್ರಮಗಳಿದ್ದಲ್ಲಿ ಬರುತ್ತಾರೆ. ಈ ರೀತಿಯ ಕೆಲಸಗಳನ್ನು ಮಾಡುವ ಶೇಕಡ ೮೦ ರಷ್ಟು ಯುವ ಜನರು ಮೆಟ್ರಿಕ್ ಅಥವಾ ಪಿಯುಸಿ ಬಿಟ್ಟವರಾಗಿದ್ದು, ಸಂಪಾದನೆ ಮಾಡಬೇಕೆಂಬ ಒತ್ತಡ ಇದೆ. ಅಲ್ಲದೆ ಸ್ನೇಹಿತರು, ಹಿರಿಯರ ಪ್ರಭಾವದಿಂದ ಹೊರಗೆ ದುಡಿಯಲು ಹೋಗುತ್ತಾರೆ. ಶಾಲೆ ಬಿಟ್ಟಿರುವ ಅಥವಾ

ಅನುತ್ತೀರ್ಣರಾಗಿ ಮನೆಯಲ್ಲಿದ್ದು ಏನು ಮಾಡಬೇಕಾಗಿದೆ, ಅದಕ್ಕೆ ಅವರನ್ನು ದುಡಿಯಲು ಕಳುಹಿಸುತ್ತೇವೆ ಎನ್ನುತ್ತಾರೆ ಪೋಷಕರು.

ಕೋಳಿಪಾಳ್ಯ ಗ್ರಾಮದ ಮುಖಂಡರೊಬ್ಬರು ತಿಳಿಸಿದಂತೆ ಆರ್ಥಿಕ ಉದಾರೀಕರಣಕ್ಕಿಂತ ಹಿಂದೆ ನಮ್ಮ ಜನರ ಸ್ಥಿತಿ ತುಂಬಾ ಚಿಂತಾಜನಕವಾಗಿದ್ದು, ಊಟಕ್ಕೂ ಕಷ್ಟಪಟ್ಟಿದ್ದೇವೆ. ಆದರೆ ಉದಾರೀಕರಣ ದಿಂದಾಗಿ ಪಟ್ಟಣ ಪ್ರದೇಶಗಳಲ್ಲಿ ಕೆಲಸಗಳು ಸಿಗುತ್ತಿದ್ದು, ಆರ್ಥಿಕ ಸಂಪಾದನೆ ಮಾಡುತ್ತಿದ್ದಾರೆ. ನಮ್ಮೂರಿನ ೯೯% ಯುವ ಜನರು ತಿರುಪೂರು, ಬೆಂಗಳೂರು, ಕೇರಳದ ಕಡೆ ಹೋಗಿ ಕೆಲಸ ಮಾಡುತ್ತಾರೆ. ಹುಡುಗರ್‍ಯಾರೂ ಸೋಮಾರಿಗಳಾಗಿ ಕಾಲ ಕಳೆಯುವುದಿಲ್ಲ, ಅವರೆಲ್ಲಾ ಸಂಪಾದನೆ ಮಾಡಿ ಗಾಡಿಗಳು (ದ್ವಿ ಚಕ್ರ ವಾಹನಗಳು, ಆಟೋ ಇತ್ಯಾದಿ), ಸ್ಥಿರಾಸ್ಥಿಗಳ ರೂಪದಲ್ಲಿ ಚಿನ್ನ, ಸೈಟು ತೆಗೆದುಕೊಳ್ಳುತ್ತಾರೆ, ಮನೆ ಕಟ್ಟುತ್ತಾರೆ. ಸಂಪಾದನೆಯ ಕೆಲಸದಲ್ಲಿ ತೊಡಗಿರುವ ಯುವ ಜನರಲ್ಲಿ ಕಲಿಯುವ ಆಸಕ್ತಿ ಇಲ್ಲ, ಆಸಕ್ತಿ ಇರುವವರು ಸಿಗುವುದು ಕಷ್ಟ. ಹೆಣ್ಣು ಮಕ್ಕಳಿಗಂತೂ ೯–೧೦ನೇ ತರಗತಿಗೆ ಮದುವೆ ಮಾಡಲಾಗುತ್ತದೆ ಹಾಗಾಗಿ ಹೆಣ್ಣು ಮಕ್ಕಳೂ ಸಿಗುವುದಿಲ್ಲ ಎಂಬ ಅಭಿಪ್ರಾಯವನ್ನು ತಿಳಿಸಿರುತ್ತಾರೆ.

ಪುಣಜನೂರು ಗೇಟಿನ ಮಾಜಿ ಗ್ರಾಮ ಪಂಚಾಯಿತಿ ಸದಸ್ಯೆಯೊಬ್ಬರ ಒಬ್ಬ ಮಗ ಬೆಂಗಳೂರಿನಲ್ಲಿ ಬಿ.ಎ ಮಾಡುತ್ತಿದ್ದು, ೩ನೇ ಮಗ ೯ ನೇ ತರಗತಿಗೆ ಶಾಲೆ ಬಿಟ್ಟು, ಪೇಯಿಂಟಿಂಗ್ ಕೆಲಸ ಮಾಡುತ್ತಿದ್ದಾನೆ. ಇವನಿಗೆ ನಿಮ್ಮ ಸಂಸ್ಥೆಯಲ್ಲಿ ಏನಾದ್ರೂ ಕೆಲಸ ಕಲಿಸಿ ನಿಮ್ಮ ಸಂಸ್ಥೆಗೆ ಕಳುಹಿಸುತ್ತೇನೆ. ಇಲ್ಲದಿದ್ದರೆ ನಮ್ಮೂರಿನ ಇತರೆ ಹುಡುಗರ ಜೊತೆ ಸೇರಿ ಪೋಲಿ ಬೀಳುತ್ತಾನೆ' ಎನ್ನುತ್ತಾರೆ. ವೀರಯ್ಯನಪುರದ ಮಹಿಳಾ ಸ್ವ–ಸಹಾಯದ ಸಂಘದ ಸದಸ್ಯೆಯೊಬ್ಬರು ತಮ್ಮ ಮಗ ತುಂಬಾ ಚೆನ್ನಾಗಿ ಚಿತ್ರ ಬರೆಯುತ್ತಾನೆ. ಚಿತ್ರ ಕಲೆ ಬಗ್ಗೆ ಅವನಿಗೆ ತುಂಬಾ ಆಸಕ್ತಿ ಇದೆ. ಅವನಿಗೆ ತರಬೇತಿ ಕೊಡಿ, ಅವನು ತಿರುಪೂರಿನಿಂದ ಬಂದ ಮೇಲೆ ನಿಮ್ಮನ್ನು ಭೇಟಿ ಮಾಡಲು ಹೇಳುತ್ತೇನೆ ಎಂದು ತಿಳಿಸಿದರು.

ಜಿಲ್ಲಾ ಪಂಚಾಯಿತಿ ಸದಸ್ಯೆಯೊಬ್ಬರು ದೇವಸ್ಥಾನವೊಂದರ ಉದ್ಘಾಟನಾ ಸಮಾರಂಭಕ್ಕೆ ಆಗಮಿಸಿದ ಸಂದರ್ಭಲ್ಲಿ 'ನಾನು ನಮ್ಮ ಸಮುದಾಯದ ಯಾವುದೇ ಗ್ರಾಮಗಳಿಗೆ ಹೋದರೂ ಜನರು ಕೊಚ್ಚೆ ನೀರಿನ ಮುಂದೆ ನಿಂತ್ತಿರುತ್ತಾರೆ. ಗ್ರಾಮದಲ್ಲಿ ಮೂಲಭೂತ ಸಮಸ್ಯೆಗಳಿದ್ದರೂ ನಮಗೆ ದೇವಸ್ಥಾನ ಕಟ್ಟಿಸಿಕೊಡಿ ಎನ್ನುತ್ತಾರೆ. ಎಷ್ಟೇ ಹೇಳಿದರೂ ಮಧ್ಯಪಾನ ಮಾಡುವುದು ಕಡಿಮೆ ಆಗಿಲ್ಲ. ಹೆಣ್ಣು ಮಕ್ಕಳು ಮೆಟ್ರಿಕ್ ಅಥವಾ ಪಿಯುಸಿ ಓದುವುದೇ ಹೆಚ್ಚಾಗಿದೆ. ಇಂತಹ ಜನರನ್ನು ಹೇಗೆ ಉದ್ಧಾರ ಮಾಡಬೇಕು ಎಂಬುದು ಸವಾಲಿನ ವಿಷಯವಾಗಿದೆ' ಎಂದು ತಿಳಿಸಿದರು.

ಗ್ರಾಮ ಪಂಚಾಯಿತಿ ಸದಸ್ಯರೊಬ್ಬರು ಮಾತನಾಡುತ್ತಾ "ನಾನು ಎರಡು ಸಲ ಪಂಚಾಯಿತಿ ಸದಸ್ಯನಾಗಿ ಕೈಲಾದಷ್ಟು ಕೆಲಸ ಮಾಡಿದ್ದೀನಿ ಅಷ್ಟು ಸಾಕು. ನಾನೀಗ ನನ್ನ ಮನೆ ಮತ್ತು ಮಕ್ಕಳ ಕಡೆ ಗಮನ ಕೊಟ್ಟು ಏನಾದರೂ ವ್ಯವಹಾರ ಮಾಡಿ ಇಂಪ್ರೂ ಆಗಬೇಕು. ಹಾಗಾಗಿ ನಾವೊಬ್ಬರೇ ಸಮಾಜದ ಕೆಲಸ ಮಾಡಲು ಆಗುವುದಿಲ್ಲ. ನಿಮ್ಮಂತಹವರ ಜೊತೆ ಸೇರಿ ಏನಾದರೂ ಒಳ್ಳೆಯ ಕೆಲಸ ಮಾಡಬಹುದು. ನಮ್ಮ ಜನರು ಕೂಡ ಈ ರೀತಿಯ ಅವಕಾಶಗಳನ್ನು ಉಪಯೋಗಿಸಿಕೊಂಡು ಮುಂದೆ ಬರಬೇಕು.

ಇಲ್ಲಿನ ಯುವ ಜನರು ಬಹಳ ಬುದ್ಧಿವಂತರಿದ್ದಾರೆ. ಒಬ್ಬರು ತಿರುಪೂರು ಅಥವಾ ಬೆಂಗಳೂರಿಗೆ ಸೇರಿದರೆ ತನ್ನ ಸ್ನೇಹಿತರನ್ನು ಸೇರಿಸಿಕೊಂಡು ಕೆಲಸ ಕಲಿಸುತ್ತಾರೆ. ಕೆಲವರು ಹೊಲಿಗೆ ಮೆಷಿನ್ ಇಟ್ಕೊಂಡು ಬಟ್ಟೆಗಳನ್ನು ಸಿದ್ಧಪಡಿಸುವ ಕೆಲಸ ಮಾಡುತ್ತಿದ್ದಾರೆ. ಅಂತಹವರಲ್ಲಿ ಒಂದಿಬ್ಬರು ತಿರುಪೂರಿನಲ್ಲೇ ಸೈಟು ತೆಗೆದಿದ್ದಾರೆ. ಈ ರೀತಿಯ ಸಹಾಯ ಮಾಡುವ ಮನೋಭಾವ ಎಲ್ಲರಲ್ಲೂ ಬರಬೇಕು" ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ಹತ್ತಿಖಾನೆ ಎಸ್ಟೇಟ್‌ನಲ್ಲಿ ಕೆಲಸ ಮಾಡುವು ಪುಣಜನೂರಿನ ನಿವಾಸಿಯೊಬ್ಬರು ತಮ್ಮ ಅಭಿಪ್ರಾಯವನ್ನು ಹಂಚಿಕೊಂಡಿದ್ದು ಹೀಗೆ. "ನಮ್ಮ ಮಕ್ಕಳಿಗೆ ನಾವು ಎಷ್ಟೇ ಹಣ ಸಂಪಾದಿಸಿ ಇಟ್ಟರೂ ಪ್ರಯೋಜನವಿಲ್ಲ. ಅವರು ಒಳ್ಳೆಯ ರೀತಿ ಬದುಕುವುದನ್ನು ಕಲಿಯಬೇಕು, ನಾಲ್ಕು ಜನರಿಗೆ ಒಳ್ಳೆಯದು ಮಾಡಬೇಕು. ಅದಕ್ಕೆ ಅನುಗುಣವಾಗಿ ನನ್ನ ಮಗನಿಗೆ ಏನಾದ್ರೂ ಕಲಿಸಿ. ನನ್ನ ಮಗನಿಗೆ ಚಿತ್ರ ಕಲೆಯಲ್ಲಿ ಆಸಕ್ತಿ ಇದ್ದು, ಮಗಳು ಮದುವೆಯಾಗಿದ್ದು, ಮನೆಯಲ್ಲೇ ಇದ್ದಾಳೆ. ಇವರಿಗೆ ಅನುಕೂಲವಾಗುವಂತೆ ಯಾವುದಾದರೂ ತರಬೇತಿಗಳನ್ನು ನೀಡಿ" ಎಂದು ತಿಳಿಸಿರುತ್ತಾರೆ.

ಕೋಳಿಪಾಳ್ಯದ ಶಾರಾದ ಮಹಿಳಾ ಸ್ವ-ಸಹಾಯ ಸಂಘದ ಸದಸ್ಯೆಯೊಬ್ಬರು "ನನಗೆ ೧೪ನೇ ವಯಸ್ಸಿಗೆ ಮದುವೆ ಮಾಡಿದ್ದರಿಂದ ನಾನು ಅನಾರೋಗ್ಯ ಹಾಗೂ ಹೊಂದಾಣಿಕೆಯ ಸಮಸ್ಯೆಗಳನ್ನು ಅನುಭವಿಸಬೇಕಾಯಿತು. ಈಗ ನನ್ನ ಮಗಳು ೯ನೇ ತರಗತಿ ಓದುತ್ತಿದ್ದು, ಅವಳನ್ನು ಮದುವೆಗೆ ಕೇಳುತ್ತಿದ್ದಾರೆ. ಅವಳು ಪಾಸಾಗಲೀ, ಫೇಲಾಗಿ ಮನೆಯಲ್ಲಿರಲಿ ನಾನಂತೂ ಬೇಗ ಮದುವೆ ಮಾಡುವು ದಿಲ್ಲ. ಏಕೆಂದರೆ ನಮ್ಮ ಹಾಗೇ ಅನಾರೋಗ್ಯ ಸಮಸ್ಯೆ ಎದುರಿಸುವುದು ಬೇಡ. ಅವಳು ಕಲಿತು, ಅರ್ಥ ಮಾಡಿಕೊಳ್ಳುವುದು ಬೇಕಾದಷ್ಟಿದೆ" ಎನ್ನುತ್ತಾರೆ.

**ಉಪಸಂಹಾರ**

ಪುಣಜನೂರು ಪಂಚಾಯಿತಿ ಗ್ರಾಮಗಳ ಯುವಜನರ ಸ್ಥಿತಿಯನ್ನು ಅವಲೋಕಿಸಿದಾಗ ಹಲವಾರು ವೈವಿಧ್ಯಮಯ ಅಂಶಗಳು ಕಂಡು ಬಂದಿವೆ. ಮುಖ್ಯವಾಗಿ ಈ ಭಾಗದಲ್ಲಿ ಯುವಜನರು ಹೆಚ್ಚಾಗಿ ಕಂಡು ಬರುತ್ತಾರೆ. ಇವರು ಮೆಟ್ರಿಕ್ ಅಥವಾ ಪಿಯುಸಿ ಹಂತಕ್ಕೆ ಶಿಕ್ಷಣವನ್ನು ನಿಲ್ಲಿಸಿ, ತಕ್ಷಣದ ಗಳಿಕೆಗಾಗಿ ವಲಸೆ ಹೋಗುತ್ತಿದ್ದಾರೆ. ಬಹುತೇಕ ಎಲ್ಲಾ ಸಮುದಾಯಗಳಲ್ಲಿ ಹೆಣ್ಣು ಮಕ್ಕಳ ಶಿಕ್ಷಣ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಣಕ್ಕೆ ಸೀಮಿತಗೊಳಿಸಲಾಗುತ್ತಿದೆ. ಬುಡಕಟ್ಟು ಸಮುದಾಯದಲ್ಲಿ ಶಾಲೆಯಿಂದ ಹೊರಗುಳಿಯುವವರ ಸಂಖ್ಯೆ ಹೆಚಾಗಿದ್ದು, ಶಿಕ್ಷಣ ಮುಂದುವರಿಸಲು ಬೇಕಾದ ವಾತಾವರಣ ನಿರ್ಮಾಣವಾಗಬೇಕಿದೆ. ಯುವ ಜನರಲ್ಲಿ ಫ್ಯಾಷನ್ ವ್ಯಾಮೋಹ ಜಾಸ್ತಿ ಇದ್ದು, ಮನರಂಜನೆಗಾಗಿ ಸಿನಿಮಾ, ಟಿವಿ ಮೊರೆ ಹೋಗುತ್ತಿದ್ದು, ಅದರ ಜೊತೆ ಅವರದೇ ಆದ ಸಾಂಸ್ಕೃತಿಕ ಚಟುವಟಿಕೆಗಳ ಕಡೆ ವಾಪಸ್ಸಾಗಬೇಕಿದೆ. ಇವರಿಗೆ ತಮ್ಮ ಜೀವನಕ್ಕೆ ಅಗತ್ಯವಿರುವ ಗಳಿಕೆ ಜೊತೆಗೆ ಸಮಾಜ, ಸಂಸ್ಕೃತಿ ಹಾಗೂ ಪ್ರಜಾಪ್ರಭುತ್ವದ ಮೌಲ್ಯಗಳು ಸಹ ಮುಖ್ಯ ಎಂಬುದನ್ನು ಅರ್ಥ ಮಾಡಿಸಬೇಕಾಗಿದೆ. ಸ್ಥಳೀಯ ವೃತ್ತಿ ಕೌಶಲ್ಯಗಳ ಜೊತೆಗೆ ತಲೆ ಮಾರುಗಳ ಹಿಂದೆ ಹಿರಿಮೆಗೆ ಪಾತ್ರವಾಗಿದ್ದ ಕಲೆ, ಸಂಸ್ಕೃತಿಗಳು ಪ್ರಾಶಸ್ತ್ಯ ಕಳೆದುಕೊಂಡು ಆಧುನಿಕತೆಯ ಸೋಗು ಹಚ್ಚಿಕೊಳ್ಳುತ್ತಿದ್ದು,

ಅವರಿಗೆ ಸ್ಥಳೀಯವಾಗಿ ಬದುಕಲು ಸೂಕ್ತವಾದ ಶಿಕ್ಷಣ, ಸ್ಥಳೀಯ ವೃತ್ತಿ ಕೌಶಲ್ಯಗಳು, ಕೃಷಿ ಮತ್ತು ಪರಿಸರದ ಕಡೆ ಗಮನ ಹರಿಸುವ ಅಗತ್ಯ ಇದೆ. ಯುವ ಜನರು ಸಾಂದರ್ಭಿಕ ಅಗತ್ಯತೆಗಳಿಗೆ ಹೆಚ್ಚು ಒತ್ತು ನೀಡುತ್ತಿದ್ದು, ಸುಸ್ಥಿರವಾದ ಬದುಕನ್ನು ರೂಪಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಹಾಗಾಗಿ ಅವರಿಗೆ ಸುಸ್ಥಿರವಾದ ಹಾಗೂ ಸ್ಥಳೀಯ ಸ್ವಾವಲಂಬಿ ಬದುಕನ್ನು ಕಲಿಸುವ ಅವಶ್ಯಕತೆ ಇದ್ದು, ಸಮಾಜ, ಕುಟುಂಬ ಯುವಜನರ ಮನೋಭಾವನೆಯನ್ನು ಅರ್ಥಮಾಡಿಕೊಂಡು ಸ್ಪಂದಿಸಬೇಕಾದ ಅನಿವಾರ್ಯತೆ ಇದೆ. ಯುವಜನರಲ್ಲಿ ಕೀಳರಿಮೆ, ಗೊಂದಲಗಳು ಹೆಚ್ಚಾಗಿದ್ದು, ಜಾಗತೀಕರಣ, ಆಧುನೀಕರಣದ ಪ್ರಭಾವ ಗಾಢವಾಗಿದೆ.

## ಪುಣಜನೂರು ಪಂಚಾಯಿತಿ ಗ್ರಾಮಗಳ ಯುವಜನರ ಛಾಯಚಿತ್ರಗಳು




ಕೋಂಡೋತ್ಸವದಲ್ಲಿ ಹೂಕುಂದ ಹಚ್ಚಿ ಸಂಭ್ರಮಿಸುತ್ತಿರುವುದು



ಕಾರ್ಯಕ್ರಮ ವೀಕ್ಷಣೆ ನಿರತ ಯುವಜನರು





ಲಕ್ಷ್ಮಿದೇವಿ ಮತ್ತು ಕುಂಭೇಶ್ವರ ಜಾತ್ರೆಯಲ್ಲಿ ನೃತ್ಯ ನಿರತ ಯುವಜನರು





ಸಿನಿಮಾ ಹಾಡುಗಳಿಗೆ ನೃತ್ಯ ಮಾಡುತ್ತಿರುವ ಯುವಕರು, ಕಲಾವಿದರು





ಯುವ ಜನರನ್ನು ಆಕರ್ಷಿಸುವ ಆಧುನಿಕ ಸಿನಿಮಾದ ಆರ್ಕೆಸ್ಟ್ರಾ ನೃತ್ಯದ ಛಾಯಚಿತ್ರಗಳು




ಬಡಗ ಹಾಡಿಗೆ ನೃತ್ಯ ಮಾಡುತ್ತಿರುವ ಸೋಲಿಗ ಯುವಜನರು



ಪಟಾಕಿ ಮಾರಾಟ ನಿರತ ಯುವಕ ವಿಜಯ್,



ಹೂವಿನ ವ್ಯಾಪಾರ ಮಾಡುತ್ತಿರುವ ಯುವಕ